


# ಚೈತ್ರರಶ್ಮಿ ಪ್ರಕಾಶನ




ಕನ್ನಡ ಪುಸ್ತಕ ಪ್ರಾಧಿಕಾರದ ಬಹುಮಾನಿತ
ನವೀನ ಭಟ್ ಗಂಗೋತ್ರಿಯವರ ಚೊಚ್ಚಲ ಕವನ ಸಂಕಲನ

ಉತ್ತರ ಕರ್ನಾಟಕ ನೆರೆ ಪರಿಸ್ಥಿತಿಯ ಅವಲೋಕನ
ಹಾಗೂ ಪರಿಹಾರ ಕಾರ್ಯದ ಅನುಭವ ಕಥನ.

## ಚೈತ್ರರಶ್ಮಿಯ ಹೊಸ ಹೆಜ್ಜೆ

ವಿಳಾಸ
ರಾಮಚಂದ್ರ ಹೆಗಡೆ ಸಿ. ಎಸ್. ನೆನಪು, ನಂ. 33(172/3), 3ನೇ 'ಸಿ' ಅಡ್ಡರಸ್ತೆ, ಕತ್ರಿಗುಪ್ಪಾ ಮುಖ್ಯ ರಸ್ತೆ, ವಿವೇಕಾನಂದ ನಗರ,
ಬೆಂಗಳೂರು – 560 085. ದೂರವಾಣಿ : 9986372503
Email : contact@chaitrarashmi.com, Web : www.chaitrarashmi.com

Editor, Printer, Publisher and owned by RAMACHANDRA HEGDE C.S. , No.53, 2nd Floor, Shamsingh Complex, Gandhi Bazaar, Bangalore-560 004. Printed at : CHITRA PRINTERS, 193, Link Road, Malleswaram, Bangalore- 560 003.

ಸೃಜನಶೀಲತೆಯ ಹುಡುಕಾಟದಲ್ಲಿ....

RNI KAR KAN/2006/19109
MAG (3)/NPP/272/2005-06

# ಚೈತ್ರರಶ್ಮಿ

– A RAY OF HOPE

ಕನ್ನಡ ಮಾಸಿಕ
ಮಾರ್ಚ್ – ಏಪ್ರಿಲ್ 2010



## ಬಲಿದಾನಿಗಳ ಸ್ಮರಣೆಯಲ್ಲಿ

# ಚೈತ್ರರಶ್ಮಿ ಪ್ರಕಾಶನ

## ಹೊರತಂದಿರುವ

# 'ನೆರೆಯ ನೋವಿಗೆ ಸ್ಪಂದನ'

# ಪುಸ್ತಕ ಬಿಡುಗಡೆ ಕಾರ್ಯಕ್ರಮ

**ಉತ್ತರ ಕರ್ನಾಟಕ ನೆರೆ ಪರಿಸ್ಥಿತಿಯ ಅವಲೋಕನ ಹಾಗೂ ಪರಿಹಾರ ಕಾರ್ಯದ ಅನುಭವ ಕಥನ.**

**ನಮ್ಮೊಂದಿಗೆ ..........**

***ಡಾ॥ ಎಸ್.ಎಂ.ಜಾಮದಾರ್***

ಆಯುಕ್ತರು, ಕರ್ನಾಟಕ ವಿದ್ಯುತ್ ನಿಗಮ ಹಾಗೂ ನೆರೆ ಪರಿಹಾರ ಕಾರ್ಯದ ವಿಶೇಷಾಧಿಕಾರಿಗಳು.

***ಡಾ॥ ಆ. ಶ್ರೀ. ಆನಂದ***

ಅಧ್ಯಕ್ಷರು, ಸಾವಯವ ಕೃಷಿ ಮಿಷನ್, ಕರ್ನಾಟಕ

***ಶ್ರೀ ಭೀಮನಗೌಡ ಪಾಟೀಲ್***

ನೆರೆ ಸಂತ್ರಸ್ಥರು, ಕೋಟ್ಯಾಳ, ಬಿಜಾಪುರ ತಾ॥

**ಚೈತ್ರರಶ್ಮಿ ಬಳಗದ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮ**

ದಿನಾಂಕ: **02 ಮೇ, ಭಾನುವಾರ ಸಂಜೆ 4.30 ಕ್ಕೆ**

ಸ್ಥಳ : **ಸೃಷ್ಟಿ ವೆಂಚರ್ಸ್,** ನಂ. 81, 1ನೇ ಮಹಡಿ, (ಪುಳಿಯೋಗರೆ ಪಾಯಿಂಟ್ ಮೇಲೆ),
ಇ.ಎ.ಟಿ. ರಸ್ತೆ ಬಸವನಗುಡಿ, ಬೆಂಗಳೂರು – 560 004

**ಬನ್ನಿ, ನೊಂದವರ ಜತೆಗಿರುವ ಭರವಸೆ ನೀಡೋಣ.**

**ನೆರೆಯ ನೋವಿಗೆ ಸ್ಪಂದಿಸಿದವರು**

* ರಾಮಚಂದ್ರ ಹೆಗಡೆ ಸಿ.ಎಸ್.
* ವೆಂಕಟೇಶ್ ದೊಡ್ಮನೆ
* ಎನ್.ಆರ್. ರೂಪಶ್ರೀ
* ಎನ್.ವಿ.ವೈದ್ಯ ಹೆಗ್ಗಾರ್
* ಪ್ರಿಯಾ ಎಂ. ಕಲ್ಲಬ್ಬೆ
* ಸುಧಾ ಎಂ. ಕರ್ಕಿಸವಲು
* ಸಂಜೆಬಕುಲ, ಶಿರಸಿ
* ನವೀನ್ ಭಟ್ ಗಂಗೋತ್ರಿ
* ಅರ್ಪಿತಾ ಸುಗಾವಿ





CHAITRA RASHMI
Kannada Monthly
ಸೃಜನಶೀಲತೆಯ ಹೊಂಬೆಳಕಿನಲ್ಲಿ.....
ಚೈತ್ರರಶ್ಮಿ - A RAY OF HOPE
ಸಂಪಾದಕ: ರಾಮಚಂದ್ರ ಹೆಗಡೆ. ಸಿ.ಎಸ್.
EDITOR: RAMACHANDRA HEGDE.C.S.
ಸಂಪುಟ: 5 ಸಂಚಿಕೆ: 6 ಮಾರ್ಚ್, ಏಪ್ರಿಲ್ - 2010 ಪುಟ: 16 ಬೆಲೆ: ರೂ. 5.00
Volume: 5 Issue: 6 March, April - 2010 Pages: 16 Rs. 5.00
RNI KAR KAN/2006/19109
MAG (3)/NPP/272/2005-06

## ಚೈತ್ರರಶ್ಮಿ ಬಳಗಕ್ಕೆ ಮತ್ತೊಂದು ಸಂಭ್ರಮ

ಚೈತ್ರರಶ್ಮಿ ಬಳಗದ ಬರಹಗಾರ ನವೀನ್ ಭಟ್ ಗಂಗೋತ್ರಿ ಅವರ 'ಅಂಟಿಕೊಳ್ಳದ ಚಿತ್ರಗಳು' ಕವನ ಸಂಕಲನ 2010ನೇ ಸಾಲಿನ ಕನ್ನಡ ಪುಸ್ತಕ ಪ್ರಾಧಿಕಾರದ 'ಯುವ ಬರಹಗಾರರ ಪ್ರೋತ್ಸಾಹ ಧನ' ಯೋಜನೆಯ ಬಹುಮಾನಕ್ಕೆ ಪಾತ್ರವಾಗಿದೆ. ಕಳೆದ ಬಾರಿ ಬಳಗದ ಪ್ರಿಯಾ ಎಂ. ಕಲ್ಲಬ್ಬೆಯವರ 'ಜೀವನ್ಮುಖಿ' ಕವನ ಸಂಕಲನ ಈ ಗೌರವಕ್ಕೆ ಪಾತ್ರವಾಗಿತ್ತು. ಈ ಬಾರಿ ಮತ್ತೊಮ್ಮೆ ಚೈತ್ರರಶ್ಮಿ ಬಳಗ ಈ ಸಂಭ್ರಮಕ್ಕೆ ಸಾಕ್ಷಿಯಾಗಿದ್ದು ನವೀನ್ ಭಟ್ ಅವರ 'ಅಂಟಿಕೊಳ್ಳದ ಚಿತ್ರಗಳು' ಕವನ ಸಂಕಲನ 'ಚೈತ್ರರಶ್ಮಿ ಪ್ರಕಾಶನ'ದ ಮೊದಲ ಕೃತಿಯಾಗಿ ಹೊರ ಬರುತ್ತಿದೆ. ಈ ಸಂಕಲನದ ಬಿಡುಗಡೆ ಕಾರ್ಯಕ್ರಮ ಕನ್ನಡ ಪುಸ್ತಕ ಪ್ರಾಧಿಕಾರದ ವತಿಯಿಂದ ಏಪ್ರಿಲ್ 20 ರಂದು ಬೆಂಗಳೂರಿನಲ್ಲಿ ನಡೆಯಲಿದೆ.

*****

ಚೈತ್ರರಶ್ಮಿ ಬಳಗದ ಬರಹಗಾರ್ತಿ ಶ್ರೀಮತಿ ಗೀತಾ ಕೊಂಕೋಡಿಯವರ ಹವಿಗನ್ನಡ ಕಥಾಸಂಕಲನ 'ಅಬ್ಬೆ' ಪುತ್ತೂರಿನಲ್ಲಿ ನಡೆದ ಸಾಹಿತ್ಯ ಕಾರ್ಯಕ್ರಮವೊಂದರಲ್ಲಿ ಲೋಕಾರ್ಪಣೆಗೊಂಡಿತು. ಗೀತಾ ಕೊಂಕೋಡಿಯವರ ಕಥೆ, ಕವನಗಳು ನಾಡಿನ ಹಲವು ಪತ್ರಿಕೆಗಳಲ್ಲಿ ಪ್ರಕಟಗೊಂಡಿದ್ದು ಇದು ಅವರ ಮೊದಲ ಕಥಾ ಸಂಕಲನ ಮತ್ತು ಹವ್ಯಕ ಕನ್ನಡದಲ್ಲಿ ಪ್ರಕಟಗೊಂಡ ಅಪರೂಪದ ಕೃತಿ. ಇವರ ಮಗಳು ಅಕ್ಷತಾ ಕೊಂಕೋಡಿ ಬಾಲ್ಯದಲ್ಲಿಯೇ ಸಾಹಿತ್ಯದಲ್ಲಿ ಅಪಾರ ಆಸಕ್ತಿ ಬೆಳೆಸಿಕೊಂಡಿರುವ ಅರಳು ಪ್ರತಿಭೆ. ಸೂರ್ಯ ಪ್ರೌಢಶಾಲೆಯಲ್ಲಿ ಒಂಭತ್ತನೇ ತರಗತಿ ಓದುತ್ತಿರುವ ಅಕ್ಷತಾಳ ಮೊದಲ ಪುಟಾಣಿ ಕವನಗಳ ಗುಚ್ಛ 'ಅಕ್ಷತೆ' ಬಂಟ್ವಾಳ ತಾಲ್ಲೂಕು ಐದನೇ ಮಕ್ಕಳ ಸಾಹಿತ್ಯ ಸಮ್ಮೇಳನದಲ್ಲಿ ಬಿಡುಗಡೆಗೊಂಡಿತು. ಇವರ ಭವಿಷ್ಯ ಉಜ್ವಲವಾಗಲಿ ಎಂದು ಚೈತ್ರರಶ್ಮಿ ಹಾರೈಸುತ್ತದೆ.

*****

ಬೆಳಗಾವಿ ಸಾರ್ವಜನಿಕ ವಾಚನಾಲಯ ಬಳಗ ಪ್ರತಿ ವರ್ಷ ಕ್ರಿಯಾಶೀಲ ಪತ್ರಕರ್ತರಿಗೆ ಉತ್ತಮ ವರದಿಗಾರಿಕೆಗಾಗಿ ನೀಡುವ 'ದ.ಗೋ. ರಾಜ್ಯಾಧ್ಯಕ್ಷ ಪುರಸ್ಕಾರ' ನಮ್ಮ ಬಳಗದ ಪೂರ್ಣಿಮಾ ಹೆಗಡೆಯವರಿಗೆ ಲಭಿಸಿದೆ. ಪೂರ್ಣಿಮಾ ಪ್ರಸ್ತುತ ಪಡಿಸಿದ 'ಪಶ್ಚಿಮ ಘಟ್ಟ – ಉಳಿದೀತೇ ವೈಶಿಷ್ಟ್ಯತೆಯ ಪಟ್ಟ' ಹಾಗೂ 'ಕಾಲುಸಂಕಕ್ಕಾಗಿ ಕಾಲಮಾನವಿಡೀ ಕಾದರು' ಎಂಬ ವರದಿಗಳಾಗಿ ಅವರು ಈ ಗೌರವಕ್ಕೆ ಪಾತ್ರರಾಗಿದ್ದಾರೆ. ಪೂರ್ಣಿಮಾಗೆ ಅಭಿನಂದನೆಗಳು.

***ಸಂಚಿಕೆಗಾಗಿ ಸಹಕರಿಸಿದವರು***

**ಶ್ರೀ ಚಂದನ್, ಬೆಂಗಳೂರು**

# ಕಾವ್ಯರಶ್ಮಿ

**–ಅರ್ಪಿತಾ ಎಸ್. ಸುಗಾವಿ, ಶಿರಸಿ**

## ಉಸಿರ ಕೊಡುವೆಯಾ?

– ಕ್ಷಿತಿಜ ಬಾನಾಡಿ

ಹಕ್ಕಿಯಂತೆ ರೆಕ್ಕೆ ಬಿಚ್ಚಿ
ಹಾರಿ ನಿನ್ನ ಮನದಿ ನಿಂದು
ನಾನು ತಂದ ಪ್ರೀತಿ ಕಡ್ಡಿ
ಕಟ್ಟಿ ಗೂಡೊಳಾಡುವಾಸೆ
ಸ್ಥಳವ ಕೊಡುವೆಯಾ?

ಬೆಳದಿಂಗಳ ರಾತ್ರಿಯಲ್ಲಿ
ಬೀಸಿ ಬರುವ ಗಾಳಿಯಲ್ಲಿ
ನನ್ನ ಮಧುರ ಭಾವಗಳನು
ಬಿಚ್ಚಿ ಹಾರಿ ಬಿಡುವ ಆಸೆ
ತಬ್ಬಿಕೊಳ್ಳುವೆಯಾ?

ಮೊದಲ ಮಳೆಯ ಮಣ್ಣಿನಲ್ಲಿ
ಹೊಮ್ಮಿ ಬರುವ ಗಂಧದಲ್ಲಿ
ನಿನ್ನ ಮುಗುಳು ನಗೆಯ ನೋಡಿ
ನಲಿದು ಹಾರಿ ಕುಣಿಯುವಾಸೆ
ಕಳುಹಿಕೊಡುವೆಯಾ?

ಮುಸ್ಸಂಜೆಯ ಮೊಗ್ಗಿನೊಳಗೆ
ಕನಸನೆಲ್ಲ ತುಂಬಿಸಿರುವೆ
ನಸುಕಿನಲ್ಲಿ ಬಿರಿವ ಸುಮದ
ಎಸಳ ರೂಪ ಧರಿಸುವಾಸೆ
ಉಸಿರ ಕೊಡುವೆಯಾ
ಬಿರಿವ ಉಸಿರ ಕೊಡುವೆಯಾ?

## ಅಮ್ಮ

ಅಮ್ಮಾ...
ಮುಂದಿನ ಮಾತು ಹೊಳೆಯಲೊಲ್ಲದು
ಕವನ ಕಟ್ಟುವ ಮನಸು ಬರೆಯುತಿಹ ಲೇಖನಿ
ತಟ್ಟನೆ ಸುಮ್ಮನಾಗುತ್ತದೆ.
ಅಕ್ಷಿ ಪಟಲದೆದುರು ನೀ ಬಂದು
ಸೊಂಟಕ್ಕೆ ಸೆರಗು ಸಿಕ್ಕಿಸಿ
ಎವೆಯಿಕ್ಕದ ನೋಟದಿಂದ ಗದರುತ್ತೀಯಾ..
ಸುಮ್ಮನಾದ ನನ್ನ ನೋಡಿ
ಮನದಲ್ಲೇ ಮರುಗುತ್ತೀಯಾ...
ದುಡಿದು ದಣಿದ ನಿನಗೆ ಬೆವರು ಜಿನುಗುವುದಿಲ್ಲ
ಅದಿನ್ನೂ ಉಳಿದಿದ್ದರೆ ತಾನೆ!
ರಕ್ತವೇ ಚರ್ಮಭೇದಿಸಿ
ಸುರಿಯ ಬೇಕಷ್ಟೇ...
ನನಗೆ ಗೊತ್ತಮ್ಮ ಅದು ಸುರಿಯುವುದೂ ಇಲ್ಲ
ಹತ್ತಗಾಗಿದೆ!
ಬಾಗಿದ ಬೆನ್ನಿನ ಹಿಂದೆ ಮಣಭಾರ
ಸಂಸಾರದ್ದು, ಅಪ್ಪ ಹೊರೆಸಿದ್ದು
ಅದಕ್ಕೆಂದು ಬೇಸರ ಪಟ್ಟಿದ್ದೇ ನೋಡಲಿಲ್ಲ
ಕೈ, ಕೈ ಹಿಸುಕಿಕೊಂಡಿದ್ದು ಗೊತ್ತಿದೆ
ಇನ್ನೂ ಸ್ವಲ್ಪ ಶಕ್ತಿ ಇದ್ದಿದ್ದರೆ ? ಎಂದು
ಆಗಾಗ ಅಶ್ರುಧಾರೆಯ ಹರಿಸಿ,
ರೊಕ್ಕವೆಂದು ಸಿಡಿದಿದ್ದಿದೆ
ಮಕ್ಕಳಿಗಾಗಿ ಮನೆಗಾಗಿ ಕತ್ತಿನ ತಾಳಿಗಾಗಿ
ತಾಳಿ, ತಾಳಿ ಬಾಳಿದ್ದಿದೆ
ಧೋ ಎಂದು ಮಳೆ ಸುರಿದಂತೆ
ನಕ್ಕಿದ್ದೂ ಇದೆ.
ಚಿಕ್ಕದೊಂದು ಕನಸು ನನಸಾದಂತೆ ಕನಸು ಕಂಡಾಗ!
ದಣಿವಾರಿಸಿಕೊಳ್ಳಬೇಕೆಂದರೂ
ನಿನಗೆ ಪುರಸೊತ್ತಿಲ್ಲ ?
ಮತ್ತೆ ಭವಿತವ್ಯಕ್ಕೆ ಎದುರು ನಿಲ್ಲುತ್ತೀಯಾ
ಅಷ್ಟೇ ಬಾಳ ಮುಸ್ಸಂಜೆಯಲ್ಲಿ
ಕಾಲ ನಿನಗುಳಿಸಿದ್ದು
ಆಗಾಗ... ಅಲ್ಲಲ್ಲಿ
ಒಂದೇ ಸಮನೆ ನಿಟ್ಟುಸಿರು.







## ಅಂತರಂಗದಿಂದ...

# ನಮ್ಮ ಇಂದಿಗಾಗಿ ತಮ್ಮ ನಾಳೆಗಳನ್ನು ಬಲಿಕೊಟ್ಟವರು....

**"ಮೇರಾ ರಂಗ್ ದೇ ,** ಮಾಯಿ ರಂಗ್ ದೇ, ಮೇರಾ ರಂಗ್ ದೇ ಬಸಂತೀ ಚೋಲಾ........" ಹಾಗೊಂದು ಹಾಡು ಲಾಹೋರ್‌ನ ಜೈಲಿನ ಗೋಡೆ ಗೋಡೆಗಳಲ್ಲಿ ಅನುರಣಿಸುತ್ತಾ, ಕೇಳಿದವರ ಎದೆಯಲ್ಲಿ ಹೊಸತೊಂದು ಭಾವ ಸೃಷ್ಟಿಸುತ್ತಾ ಸೆರೆಮನೆಯ ಎಲ್ಲೆಯನ್ನು ದಾಟಿ ಮಾರ್ದನಿಸುತ್ತಿತ್ತು. ಆ ಹಾಡು ಲಾಹೋರಿನ ಜೈಲಿನಲ್ಲಿ ಖೈದಿಗಳಿಗಾಗಿ ಏರ್ಪಡಿಸಿದ್ದ ಯಾವುದೋ ಸಾಂಸ್ಕೃತಿಕ ಕಾರ್ಯಕ್ರಮದ್ದಾಗಲಿ, ಸಂಗೀತ ಗೋಷ್ಟಿಯದ್ದಾಗಲಿ ಆಗಿರಲಿಲ್ಲ. ದೇಶಭಕ್ತಿಯ ಮಹಾಪರಾಧಕ್ಕಾಗಿ ನೇಣಿನ ಶಿಕ್ಷೆಗೆ ಒಳಗಾದ ಮೂವರು ಭಾರತೀಯ ಯುವಕರು ತಮ್ಮ ಬಲಿದಾನದ ಸಮಯ ಹತ್ತಿರವಾಯಿತೆಂದು ಸಂಭ್ರಮದಿಂದ ಆನಂದದಿಂದ ಹೇಳತೊಡಗಿದ್ದ ಹಾಡದು. ಸಾಯಲು ಹೊರಟವರಿಂದ ಸಂಭ್ರಮದ ಹಾಡು!!

ತಾಯ ವಿಮೋಚನೆಗಾಗಿ, ಸ್ವಾತಂತ್ರ್ಯದ ಕನಸು ಕಂಡ ಆ ಮೂವರು ಭಾರತೀಯ ಯುವಕರಿಗೆ ಬ್ರಿಟಿಶ್ ಸರ್ಕಾರ ನೀಡಿದ್ದು ಗಲ್ಲು ಶಿಕ್ಷೆಯ ಉಡುಗೊರೆ. ನ್ಯಾಯಾಲಯದ ತೀರ್ಪಿನ ಪ್ರಕಾರ ಮರುದಿನ ಗಲ್ಲಿಗೇರಿಸ ಬೇಕಿತ್ತಾದರೂ ದೇಶಾಭಿಮಾನಿಗಳ ಪ್ರತಿಭಟನೆಗೆ ಹೆದರಿ ಬ್ರಿಟಿಶ್ ಸರ್ಕಾರ ಒಂದು ದಿನ ಮುಂಚೆಯೇ ಅವರನ್ನು ನೇಣಿ ಗೇರಿಸಲು ನಿರ್ಧರಿಸಿತ್ತು. ಸೆರೆಮನೆಯ ಅಧಿಕಾರಿಗಳು ಆ ಯುವಕರಿಗೆ ಈ ವಿಷಯ ತಿಳಿಸಿದಾಗ ಅವರಿಗೋ ಅತ್ಯಾನಂದ. ಆ ಮೂವರು ಗೆಳೆಯರಲ್ಲೂ ಪೈಪೋಟಿ – ತಮ್ಮಲ್ಲಿ ಮೊದಲು ಗಲ್ಲಿಗೇರುವ ಅವಕಾಶ ಯಾರದಿರಬೇಕು ಎಂಬ ಸಲುವಾಗಿ!!. ಅವರಿಗದು ಮಾತೃಭೂಮಿಯ ಮುಕ್ತಿಗಾಗಿ ಬಲಿದಾನ ಗೈಯ್ಯುವ ಭಾಗ್ಯ !.

ಪ್ರತ್ಯಕ್ಷ ಸಾವಿನ ಎದುರು ನಿಂತಾಗಲೂ ಅವರಲ್ಲಿ ಭಯದ ಲವಲೇಶವೂ ಇಲ್ಲ. ಗಲ್ಲಿನ ವೇದಿಕೆ ಏರಿದಾಗಲೂ ಮುಖದಲ್ಲಿ ನಗು. ಇನ್ನು ಕೆಲವೇ ಕ್ಷಣಗಳಲ್ಲಿ ತಮ್ಮ ಜೀವ ತೆಗೆವ ನೇಣಿನ ಕುಣಿಕೆಯನ್ನು ಅವರು ಚುಂಬಿಸಿದರು. ಮನದಲ್ಲಿ ಅದೇನನ್ನೋ ಸಾಧಿಸಿದ ತೃಪ್ತಿ. ಮೊಗದಲ್ಲಿ ಚೈತನ್ಯದ ಚಿಲುಮೆ. ಸಾಯಲು ಹೊರಟವರ ಮುಖದಲ್ಲಿ ನಗು. ಬ್ರಿಟಿಶ್ ಅಧಿಕಾರಿಗಳಿಗೆ ಅತ್ಯಾಶ್ಚರ್ಯ. ಅಲ್ಲಿದ್ದವರು ಐದು ಮಂದಿ ಬ್ರಿಟಿಷ್ ಅಧಿಕಾರಿಗಳು . ಒಬ್ಬ ಬ್ರಿಟಿಷ್ ಅಧಿಕಾರಿ ಕೇಳಿದ 'ಯಾಕೆ ನಗುತ್ತಿದ್ದೀರಿ?' ಬಲಿದಾನಕ್ಕೆ ಸಿದ್ಧನಾದ ಯುವಕರಲ್ಲಿ ಒಬ್ಬ ಹೇಳಿದ "ಸಾರ್ ನೀವು ಅದೃಷ್ಟವಂತರು!". ಬ್ರಿಟಿಷ್ ಅಧಿಕಾರಿಗೆ ಮತ್ತಷ್ಟು ಅಚ್ಚರಿ . 'ಕ್ಷಣದಲ್ಲಿ ಹೆಣವಾಗಿ

ಉರುಳುವ ನೀವು ನಮ್ಮ ಅದೃಷ್ಟವನ್ನೇಕೆ ಹೊಗಳ್ತೀರಿ?' ಆತನ ಪ್ರಶ್ನೆ. ಅದಕ್ಕೆ ಆ ಭಾರತೀಯ ಯುವಕ ನಗುತ್ತಲೇ ಉತ್ತರಿಸುತ್ತಾನೆ. "ತನ್ನ ತಾಯ್ನಾಡಿನ ಮುಕ್ತಿಗಾಗಿ ,ಸ್ವಾತಂತ್ರ್ಯದ ಕನಸಿಗಾಗಿ ಈ ನಾಡಿನ ಯುವಕ ಅದೆಷ್ಟು ಆನಂದದಿಂದ, ಸಂತೋಷದಿಂದ, ಸಂಭ್ರಮದಿಂದ ಬಲಿದಾನ ಮಾಡ್ತಾನೆ, ಅದನ್ನು ನೋಡುವ ಅದೃಷ್ಟ 30 ಕೋಟಿ ಭಾರತೀಯರಲ್ಲಿ ನಿಮಗೆ ಐದು ಜನರಿಗೆ ಮಾತ್ರ ಸಿಗ್ತಿರೋದು, ನೀವು ಅದೃಷ್ಟವಂತರು!!" .

ಎಂತಹ ತಾಕತ್ತಿನ ಮಾತದು. ಸಾವಿನ ಸಮ್ಮುಖದಲ್ಲೂ ಅಂದು ಹಾಗೆ ದಿಟ್ಟ ವಾಗಿ ಮಾತಾಡಿದವನು ನಮ್ಮೆಲ್ಲರ ಪ್ರೀತಿಯ ಸರ್ದಾರ್ ಭಗತ್ ಸಿಂಗ್. ಜತೆಗಿದ್ದವರು ಅವನಷ್ಟೇ ಉಜ್ವಲ ದೇಶಭಕ್ತಿ, ಸ್ವಾತಂತ್ರ್ಯದ ಕನಸನ್ನು ಎದೆಯೊಳಗಿಟ್ಟುಕೊಂಡಿದ್ದ ಸುಖದೇವ್ ಮತ್ತು ಶಿವರಾಂ ರಾಜಗುರು.

ಅಂದು 23 ಮಾರ್ಚ್ 1931. ಇನ್ನೂ ತಾರುಣ್ಯದ ಹೊಸ್ತಿಲಲ್ಲಿದ್ದ ಭಗತ್ ಸಿಂಗ್, ಸುಖದೇವ್, ರಾಜಗುರು ಈ ನಮ್ಮ ಭಾರತದ ದಾಸ್ಯ ವಿಮೋಚನೆಗಾಗಿ, ತಮ್ಮ ಮಾತೃಭೂಮಿಯ ಅಗಾಧ ಪ್ರೀತಿ, ಉಜ್ವಲ ದೇಶಭಕ್ತಿಯ ಕಾರಣಕ್ಕಾಗಿ ನಗುನಗುತ್ತಲೇ ನೇಣಿಗೇರಿದ ದಿನ. 'ಈ ದೇಶಕಾಗಿ ಸಾಯಲೂ ಸಿದ್ಧ' ಅನ್ನೋದು ಕೇವಲ ಮಾತಲ್ಲ, ಈ ದೇಶದ ಯುವಕರು ಮಾತೃಭೂಮಿಯ ಒಳಿತಿಗಾಗಿ ಸಾವಿಗೂ ಸವಾಲು ಹಾಕಬಲ್ಲರು ಎಂಬುದನ್ನು ಜಗತ್ತಿಗೇ ನಿರೂಪಿಸಿ ಸಾಧಿಸಿ ತೋರಿಸಿದ ದಿನ. ಅಂದು ಅವರಿಗಿದ್ದದ್ದು ಭಾರತದ ದಾಸ್ಯ ವಿಮೋಚನೆ ಹಾಗೂ ಸ್ವತಂತ್ರ ಭಾರತದ ಕನಸು ಮಾತ್ರ. ನಾವು ಸ್ವತಂತ್ರರಾಗಿ, ದಾಸ್ಯಮುಕ್ತರಾಗಿ ಇರುವ ಇಂದಿನ ಈ ದಿನಗಳಗಾಗಿ ಅವರು ತಮ್ಮ ಸುಂದರ ನಾಳೆಗಳನ್ನು ಬಲಿಕೊಟ್ಟಾಗ , ತಾಯ್ನಾಡಿಗಾಗಿ ನಗುನಗುತ್ತಾ ನೇಣಿಗೇರಿದಾಗ ಭಗತ್ ಸಿಂಗ್‌ಗೆ ಕೇವಲ 23 ವರ್ಷ, ಸುಖದೇವ್ ಗೆ 27 ವರ್ಷ ಹಾಗೂ ರಾಜಗುರು ಗೆ 25 ವರ್ಷ!. ಯೌವನದ ಅಮಲು ಏರುವ ಹೊತ್ತಿನಲ್ಲೇ ತಮ್ಮೆಲ್ಲ ವೈಯಕ್ತಿಕ ಸುಖ ಸಂತೋಷಗಳನ್ನು ಬದಿಗಿರಿಸಿ ತಾಯಿ ಭಾರತಿಯ ಆನಂದ, ದಾಸ್ಯಮುಕ್ತಿಯನ್ನೇ ಜೀವನದ ಧ್ಯೇಯವಾಗಿಸಿ ಕೊಂಡವರು ಅವರು. ಜಗತ್ತಿನ ಸ್ವಾತಂತ್ರ್ಯ ಇತಿಹಾಸದಲ್ಲೇ ಅವರದು ಧೀರೋದಾತ್ತ ಅಧ್ಯಾಯ. ಇನ್ನೂ ಶತ ಶತಮಾನಗಳವರೆಗೆ ಭಾರತೀಯ ಯುವಕರಿಗೊಂದು ಆದರ್ಶ, ಅನುಪಮ ಮಾದರಿ, ಉಜ್ವಲ ಮಾರ್ಗದರ್ಶಿ.

ಮನೆಯಲ್ಲಿ ಮದುವೆ ಮಾಡುತ್ತೇನೆಂದಾಗ 'ಭಾರತದ ಸ್ವಾತಂತ್ರ್ಯವೇ ನನ್ನ ಮದುವೆ' ಎಂದು ಪತ್ರ ಬರೆದಿಟ್ಟು ಮನೆಯಿಂದ ಹೊರಬಂದು ಸಂಪೂರ್ಣ ತನ್ನನ್ನೇ ದೇಶಕ್ಕಾಗಿ ಸಮರ್ಪಿಸಿಕೊಂಡ ಭಗತ್, ದೇಶಾಭಿಮಾನವನ್ನೇ ತಮ್ಮ ರಕ್ತದ ಕಣಕಣ ದಲ್ಲಿ ತುಂಬಿಕೊಂಡು , ದೇಶಭಕ್ತಿಯನ್ನೇ ಉಸಿರಾಡುತ್ತಾ ಬಲಿದಾನದ ಸಮಯ ಬಂದಾಗ 'ನಾನು ಮೊದಲು ನಾನು ಮೊದಲು' ಎಂದು ಪೈಪೋಟಿಗಿಳಿದು ನಗು ನಗುತ್ತಾ ನೇಣಿ ಗೇರಿದ ಸುಖದೇವ್, ರಾಜಗುರು ......ಎಂತಹ ವೀರ ಪರಂಪರೆಯ ಮಕ್ಕಳು ನಾವು!. ಆದರೆ ನಮ್ಮಲ್ಲೇಕಿಂದು ಆತ್ಮ ವಿಸ್ಮೃತಿಯ ಕರಿನೆರಳು?. ನಾವಿಂದು ಬಲಿದಾನಗೈಯಬೇಕಿಲ್ಲ. ,ಮನೆ ಮಠ ಸಂಸಾರ ಬಿಟ್ಟು ಬರಬೇಕಿಲ್ಲ. ಯೌವನ, ಬದುಕನ್ನು ತ್ಯಾಗ ಮಾಡಬೇಕಿಲ್ಲ . ಆದರೆ ಕನಿಷ್ಠ ದೇಶವನ್ನು ಪ್ರೀತಿಸಲಾರೆವಾ ? ದೇಶದ ಒಳಿತಿಗೆ ಸ್ಪಂದಿಸಲಾರೆವಾ? ಆ ವೀರ ಬಲಿದಾನಿಗಳ ಬಗ್ಗೆ ನಮ್ಮ ಮಕ್ಕಳಿಗೆ ಹೇಳಲಾರೆವಾ? ನಮ್ಮ ಈ ವೀರ ಪರಂಪರೆಯ ಬಗ್ಗೆ ಅಭಿಮಾನ ಮೂಡಿಸಲಾರೆವಾ? , ಈ ದೇಶದ ರೈತ, ಗಡಿಕಾಯುವ ಸೈನಿಕ ರ ಕುರಿತು ಕಿಂಚಿತ್ತೂ ಕಾಳಜಿ ಹೊಂದಲಾರೆವಾ? ಅಷ್ಟೂ ಮಾಡಲಾಗದಿದ್ದರೆ ಸುಖಾಸುಮ್ಮನೆ ಈ ದೇಶಕ್ಕೆ ಬೈಯ್ಯೋದು ಬಿಟ್ಟು , ಈ ದೇಶವನ್ನು ಟೀಕಿಸೋದು ಬಿಟ್ಟು , ದೇಶಕ್ಕಾಗಿ ಕೆಲಸ ಮಾಡುತ್ತಿರುವವರ ಕಾಲೆಳೆಯೋದು ಬಿಟ್ಟು ಸುಮ್ಮನಿರಲಾರೆವಾ? .

ದೇಶಕ್ಕಾಗಿ ನಾವೇನೂ ಮಾಡಬೇಕಿಲ್ಲ. ನನ್ನ ಹಳ್ಳಿ, ನನ್ನ ಊರು, ನನ್ನ ಜನ, ನನ್ನ ಸುತ್ತಮುತ್ತಲಿನ ಸಮಾಜಕ್ಕಾಗಿ ಸ್ಪಂದಿಸುವುದೇ , ತುಡಿಯುವುದೇ , ಸಮಾಜದ ಒಳಿತಿಗೆ ಶ್ರಮಿಸುವುದೇ ನಾವಿಂದು ಮಾಡಬೇಕಾದ ಕಾರ್ಯ. ಅದೇ ದೇಶ ಕಟ್ಟುವ ಕೆಲಸ.

ಭಗತ್ ಸಿಂಗ್, ರಾಜಗುರು, ಸುಖದೇವ್ ರ ಬಲಿದಾನದ ಈ ದಿನ ಅಂತಹದೊಂದು ಸಂಕಲ್ಪ ಮಾಡೋಣ. ಇಲ್ಲದಿದ್ದರೆ ಮತ್ತೊಂದು ಮಾರ್ಚ್ 23 ಬರುತ್ತದೆ, ಹೋಗುತ್ತದೆ. ಮತ್ತು ನಾವು ಒಂದೊಂದೇ ವರ್ಷ ಸಾವಿಗೆ ಹತ್ತಿರವಾಗುತ್ತಾ ಹೋಗುತ್ತೇವೆ . ಅಷ್ಟೇ.

–ನಿಮ್ಮವನು **ರಾಚಂ**





ಬಳಕೆಯನ್ನೇ ನಿಲ್ಲಿಸಿದ್ದೇವೆ ಎಂದಾಗ ಅವರ ಮಾತಿನಲ್ಲಿ ಸಾವಯವ ಶೈಲಿಯ ಬಗೆಗಿನ ನಂಬಿಕೆ ವ್ಯಕ್ತವಾಗುತ್ತದೆ. ಅಲ್ಲದೇ ರಾಸಾಯನಿಕದ ಅಪಾಯದ ಮನವರಿಕೆಯಾಗಿದೆ ಅದನ್ನು ನಾವು ನಿರ್ಲಕ್ಷಿಸಿ ಬೇರೆಯವರಿಗೂ ತಿಳಿಸುವುದಾಗಿ, ಜತೆಗೆ ಸಾವಯವವನ್ನೇ ಉತ್ತೇಜಿಸುವುದಾಗಿ ಗ್ರಾಮದ ರೈತರು ಹೇಳಿಕೊಳ್ಳುವಷ್ಟು ಎರಡೇ ವರ್ಷದಲ್ಲಿ ಅಭಿವೃದ್ಧಿ ಸಾಧಿಸಿದ್ದಾರೆ. ಕಸವೆಂದು ತೆಗೆದು ಒಗೆಯುವ ವಸ್ತುಗಳೇ ನೆರವಿಗೆ ನಿಂತು ನಮ್ಮ ಅಭಿವೃದ್ಧಿಯಲ್ಲಿ ಗಣನೀಯ ಪಾತ್ರ ವಹಿಸುವ ಅರಿವು ಹೊಸ ಬೆಳಕಾಗಿ ಕಾಣುತ್ತಿದೆ.

ಅವೈಜ್ಞಾನಿಕ ಸಾಗುವಳಿ ನಡೆಯುತ್ತಿದ್ದ ಭೂಮಿಯಲ್ಲಿ ಸಾವಯವದ ಹಸಿರು ಸಮೃದ್ಧವಾಗಿ ಕಾಣುತ್ತಿದ್ದು ಕೃಷಿ ಪ್ರಯೋಗ ಪರಿವಾರದ ಉದ್ದೇಶ ಈಡೇರಿದಂತಾಗಿದೆ. ಲಾಲಗುಳಿ ಸಾವಯವ ಗ್ರಾಮ ಇತರ ಕೃಷಿಕರಿಗೂ ಮಾದರಿ ಪ್ರಯತ್ನ.

**ಹೆಚ್ಚಿನ ಮಾಹಿತಿಗೆ : ಗಣಪತಿ ಮೆಣಸುಮನೆ, ಕೃಷಿ ಪ್ರಯೋಗ ಪರಿವಾರ ಕ್ಷೇತ್ರಾಧಿಕಾರಿ, ಅಕ್ಷಯ ಜೀವನ ಆರ್ಗೆನಿಕ್ಸ್, ಲಾಲಗುಳಿ, ಯಲ್ಲಾಪುರ (ಉ. ಕ.) ಮೊ : 9986399631**

## ಡೊಂಕೋಕ್ತಿ

- ಉಪ್ಪಿನಕಾಯಿ ಎಂದಿಗೂ ಹಣ್ಣಾಗುವುದಿಲ್ಲ.
- ಹಲ್ಲಿಲ್ಲದವನಿಗೆ ಕಬ್ಬು ಡೊಂಕು.
- ಬುದ್ಧಿವಂತಿಕೆಗೆ ಮಿತಿಯಿದೆ. ಆದರೆ, ಮೂರ್ಖತೆಗಿಲ್ಲ. ಹಾಗಾಗಿ ಮೂರ್ಖರೇ ಶ್ರೇಷ್ಠರು.
- ಮನಸ್ಸಿದ್ದಲ್ಲಿ ಮಾರ್ಗವಿದೆ.ಆದರೆ, ಮಾರ್ಗವಿದ್ದಲ್ಲಿ ಮನಸ್ಸು ಇರುವುದಿಲ್ಲ.
- ಗುಡಿಗೋಪುರಗಳನ್ನು ನಿರ್ಮಿಸುವ ಉದ್ಯಮಕ್ಕೆ 'ಗುಡಿ ಕೈಗಾರಿಕೆ' ಎನ್ನಬಹುದು.
- ಇದ್ದುದ್ದೆಲ್ಲವ ಮಾರಿ ಕುಡಿಯುವುದರೆಡೆಗೆ ತುಡಿವುದೇ (ಕೆಲವರ) ಜೀವನ.

– ವಿ.ಸುಂಕಸಾಳ
9844673588

## ವಿಷಯ •

### ದೇಶದಲ್ಲಿ 'ನಕ್ಸಲ್ ಭಾರೀ'

ದೇಶದಲ್ಲಿ ಜನವರಿಯಿಂದ ಜೂನ್ ವರೆಗೆ 1128 ನಕ್ಸಲ್ ಹಿಂಸಾಚಾರ ನಡೆದಿದ್ದು 455 ನಾಗರೀಕರು ಹಾಗೂ ಭದ್ರತಾ ಸಿಬ್ಬಂದಿ ಹತರಾಗಿದ್ದಾರೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ. ವಿವಿಧ ರಾಜ್ಯಗಳಲ್ಲಿ ಮುಖ್ಯವಾಗಿ ಛತ್ತೀಸ್ ಗಢ, ಜಾರ್ಖಂಡ್, ಬಿಹಾರಗಳಲ್ಲಿ ಈ ವರ್ಷ ನಕ್ಸಲ್ ಹಿಂಸೆ ಭಾರೀ ಪ್ರಮಾಣದಲ್ಲಿ ಏರಿಕೆಯಾಗಿದೆ. ಕಳೆದ ಐದು ವರ್ಷಗಳಲ್ಲಿ ದೇಶಾದ್ಯಂತ ನಡೆದ 7,806 ನಕ್ಸಲ್ ದಾಳಿಗಳಲ್ಲಿ 5,600 ಕ್ಕೂ ಅಧಿಕ ಮಂದಿ ಪ್ರಾಣತೆತ್ತಿದ್ದಾರೆ. ಆಂಧ್ರಪ್ರದೇಶ, ಛತ್ತೀಸ್ ಗಢ, ಜಾರ್ಖಂಡ್, ಬಿಹಾರ ಮೊದಲಾದ ರಾಜ್ಯಗಳನ್ನೊಳಗೊಂಡ 'ರೆಡ್ ಕಾರಿಡಾರ್' ನಲ್ಲೇ ಅಧಿಕ ಪ್ರಮಾಣದ ಸಾವು ಸಂಭವಿಸಿದೆ. ಛತ್ತೀಸ್‌ಗಡದಲ್ಲಿ ಅತ್ಯಧಿಕ ಎಂದರೆ 2,654 ನಕ್ಸಲ್ ದಾಳಿಗಳಲ್ಲಿ 1250 ಜನ ಬಲಿಯಾಗಿದ್ದಾರೆ.

## ವಿಷಾದ •



ಸಾವಯವ ಪದ್ಧತಿಯಲ್ಲಿ ವ್ಯವಸಾಯ ನಡೆಯುತ್ತಿದೆ. ಲಾಲಗುಳಿ 'ಅಕ್ಷಯ ಜೀವನ' ಸಂಸ್ಥೆಯೂ ಕೃಷಿ ಪ್ರಯೋಗ ಪರಿವಾರ ಕರ್ನಾಟಕ, ಕೃಷಿ ಇಲಾಖೆ, ತೋಟಗಾರಿಕಾ ಇಲಾಖೆಗಳ ಸಹಕಾರದಲ್ಲಿ ಈ ಗ್ರಾಮವನ್ನು ಸಾವಯುವ ಗ್ರಾಮವನ್ನಾಗಿ ಪರಿವರ್ತಿಸಲು ದತ್ತು ತೆಗೆದುಕೊಂಡಿದೆ.

ವಿಶೇಷವಾಗಿ ಮರಾಠಿಗರು ಹಾಗೂ ಹಿಂದುಳಿದವರು ಈ ಪ್ರದೇಶದಲ್ಲಿ ಹೆಚ್ಚಾಗಿ ವಾಸಿಸುತ್ತಿದ್ದಾರೆ. ಅಡಿಕೆ, ಬಾಳೆ, ತೆಂಗು, ಭತ್ತ ಬೆಳೆಯುವುದನ್ನೆ ಕಸುಬಾಗಿಸಿಕೊಂಡು ಬಹು ವರ್ಷದಿಂದ ಕೃಷಿಕ ಜೀವನವನ್ನು ಸಾಗಿಸುತ್ತಿದ್ದಾರೆ. ಪಕ್ಕದಲ್ಲೇ ಸಮೃದ್ಧ ಕಾಡು, ಸಮೃದ್ಧ ನೀರಾವರಿ ಇದ್ದಾಗ್ಯೂ ಕೂಡ ಅದರ ಸಮರ್ಪಕ ಬಳಕೆ ಗೊತ್ತಿರದಿದ್ದವರೂ ಎಷ್ಟೋ ಮಂದಿ. ಈ ಎಲ್ಲ ಸಂಪನ್ಮೂಲಗಳನ್ನು ಬಳಸಿಕೊಂಡು ತಮ್ಮ ಇಳುವರಿಯನ್ನು ಜಾಸ್ತಿಮಾಡಿಕೊಳ್ಳುವ ಕಲ್ಪನೆ ಹೊಸತು. ಈ ಗ್ರಾಮದಲ್ಲಿ ಶುರುವಾದ ಸಾವಯವ ಕ್ರಾಂತಿಯಿಂದಾಗಿ ಸಾಮಾನ್ಯ ರೈತರೂ ಕೂಡ ಕೃಷಿಯಲ್ಲಿ ಹೊಸತನ ಹಾಗೂ ಸಮೃದ್ಧಿಯನ್ನು ಕಂಡುಕೊಳ್ಳುತ್ತಿದ್ದಾರೆ. ಈ ಊರಲ್ಲಿ ಈಗ ನಿತ್ಯವೂ ಹಬ್ಬ. ಪ್ರತೀ ವಾರ ಒಂದು ತರಬೇತಿ ಶಿಬಿರ, ವಿವಿಧ ಸಸ್ಯ ತಳಿ, ಗೊಬ್ಬರ ತಯಾರಿಕೆ, ಭೂ ನಿರ್ವಹಣೆ, ಜಲ ನಿರ್ವಹಣೆ, ಕಾಂಪೋಸ್ಟ್ ಮುಂತಾದ ಸಂಗತಿಗಳ ಬಗ್ಗೆ ತಜ್ಞರನ್ನು ಕರೆಯಿಸಿ ಉಪನ್ಯಾಸ ಪ್ರಾತ್ಯಕ್ಷಿಕೆಗಳು, ತರಬೇತಿ ನೀಡುತ್ತ ತಿಳುವಳಿಕೆ ನೀಡುವ ಕಾರ್ಯದಲ್ಲಿ ಅಕ್ಷಯ ಜೀವನ ಹೆಜ್ಜೆ ಇಟ್ಟಿದೆ. ನೂರಾರು ರೈತ ಕುಟುಂಬಗಳನ್ನು ಈ ಯೋಜನೆಗೆ ಒಳಪಡಿಸಲಾಗಿದೆ.

ಈ ಎರಡು ವರ್ಷಗಳಲ್ಲಿ 102 ಕುಟುಂಬಗಳ 320 ಎಕರೆ ಭೂಮಿಯನ್ನು ಈ ಯೋಜನೆಗೆ ಒಳಪಡಿಸಲಾಗಿದ್ದು ಪ್ರತಿ ವರ್ಷ 500 ಟನ್ ಕಾಂಪೋಸ್ಟ ಗೊಬ್ಬರ, 15000 ಲೀಟರ್ ಜೀವಾಮೃತವನ್ನು ತಯಾರಿಸುತ್ತೇವೆ ಎಂದು ಮಾಹಿತಿ ನೀಡುತ್ತಾರೆ 'ಅಕ್ಷಯ ಜೀವನದ' ಕ್ಷೇತ್ರಾಧಿಕಾರಿ ಗಣಪತಿ ಮೆಣಸುಮನೆ.

ಊರಿನ ಸುತ್ತಮುತ್ತಲೂ ಈಗಾಗಲೇ 19 ಕೃಷಿ ಹೊಂಡ ಸಾವಿರಕ್ಕೂ ಮಿಕ್ಕಿ ಇಂಗು ಗುಂಡಿಗಳನ್ನು ನಿರ್ಮಿಸಲಾಗಿದೆ. ಒಟ್ಟೂ 7 ಗುಂಪುಗಳಾಗಿ ಫಲಾನುಭವಿಗಳನ್ನು ವಿಂಗಡಿಸಲಾಗಿದ್ದು ಎಲ್ಲರೂ ತಿಂಗಳಿಗೆ ಎರಡು ಬಾರಿ ಅವಲೋಕನ ಸಭೆ ಸೇರುತ್ತಾರೆ. ಇತ್ತೀಚೆಗಷ್ಟೇ ಈ ಸಾವಯವ ಗ್ರಾಮದಲ್ಲಿ ಹೊನ್ನ ಹಬ್ಬ 2008 ಎಂಬ ವಿಶೇಷ ಕಾರ್ಯಕ್ರಮ ಜರುಗಿತು. 16 ಭತ್ತದ ತಳಿಗಳ ಪ್ರದರ್ಶನ, ಕ್ಷೇತ್ರೋತ್ಸವ ಹಾಗೂ ವಸ್ತು ಪ್ರದರ್ಶನಗಳು ನಡೆದು ಗಮನ ಸೆಳೆಯಿತು. ಬೃಹತ್ ಗಾತ್ರದ ತೆಂಗಿನ ಕಾಯಿ ಹಿಂಡಿಗೆ, ಬಾಳೆಗೊನೆ, ಸ್ವತಃ ಬೆಳೆದ ವಿವಿಧ ರೀತಿಯ ತರಕಾರಿಗಳ ಪ್ರದರ್ಶನದಲ್ಲಿ ರೈತರು ಪಾಲ್ಗೊಂಡಾಗ ಅವರ ಮುಖದಲ್ಲಿ ಹೊಸ ಉತ್ಸಾಹ ಚಿಮ್ಮುತ್ತಿತ್ತು.

ವಿವಿಧ ಇಲಾಖೆಗಳ ಅಧಿಕಾರಿಗಳು ಆಗಮಿಸಿ ಇವರ ಪ್ರಯತ್ನಕ್ಕೆ ಶುಭ ಕೋರಿದ್ದಾರೆ. ಕೆನರಾ ಸಂಸದ ಅನಂತಕುಮಾರ ಹೆಗಡೆ ಹೊನ್ನ ಹಬ್ಬಕ್ಕೆ ಆಗಮಿಸಿದ ಸಂದರ್ಭದಲ್ಲಿ ರೈತರಿಗೆ ತಮ್ಮ ಸಾವಯವ ಪದ್ಧತಿಯಲ್ಲಿ ಬೆಳೆದ ಬೆಳೆಗಳಿಗೆ ವ್ಯವಸ್ಥಿತ ಮಾರುಕಟ್ಟೆಯನ್ನು ಒದಗಿಸುತ್ತೇನೆಂದು ನೀಡಿದ ಭರವಸೆ ಮತ್ತಷ್ಟು ಹುಮ್ಮಸ್ಸು ನೀಡಿದೆ ಎನ್ನುತ್ತಾರೆ ಲಾಲಗುಳಿಯ ಕೃಷಿಕರು. ಈ ಗ್ರಾಮದಲ್ಲಿ ಈಗ ರಾಸಾಯನಿಕದ





ಲಲಿತ ಲಹರಿ



# ರಾತ್ರಿ ಮುಗಿದಮೇಲೆ ಬೆಳಗು ಆಗಲೇ ಬೇಕಲ್ವಾ?

ಸ್ವರ್ಣಗೌರಿ ವೆಂಕಟೇಶ್, ಬೆಂಗಳೂರು

**ಸುಮಾರು** ಇಪ್ಪತ್ತು ವರ್ಷಗಳ ಹಿಂದೆ ಪ್ರಸಿದ್ಧ ಕನ್ನಡ ವಾರ ಪತ್ರಿಕೆಯೊಂದು ಓದುಗರ ಪ್ರತಿಕ್ರಿಯೆಗೆ ಆಹ್ವಾನಿಸಿತ್ತು. ವಿಷಯ; "ಪ್ರತಿಭಾ ಪಲಾಯನ". ಅದರಲ್ಲಿ ಎಷ್ಟು ಜನ ಭಾಗವಹಿಸಿದ್ದರು ಅಂದರೆ ಪತ್ರಿಕೆಗೆ ಬರೋಬರಿ ಒಳ್ಳೆ ವ್ಯಾಪಾರ ಆಗಿತ್ತು. ಪ್ರತಿಕ್ರಿಯೆಗೆ ಪ್ರತಿಕ್ರಿಯೆ, ಮತ್ತೆ ಬರೆಯುವುದು, ಮತ್ತೆ ವಾದ-ವಿವಾದ. ಇದೇ ವಿಷಯ ಮೂರು ನಾಲ್ಕುವಾರ ಓಡಿ ಹಾಕಿಸಿದ ಪ್ರಿಂಟೆಲ್ಲಾ ಖರ್ಚಾಯಿತು. ಬಹುಶ ಆಗಿನಕಾಲದಲ್ಲಿ ಇಂಟರ್ನೆಟ್ ಇದ್ದಿದ್ದರೆ ಆ ವಿಷಯ ಅಷ್ಟು ದಿನ ಓಡುತ್ತಿದ್ದಿದ್ದು ಅನುಮಾನ, ಒಟ್ಟಿನಲ್ಲಿ ಅವರ ಉದ್ದೇಶ ಫಲಕಾರಿಯಾಯಿತು. ಇರಲಿ, ವಿಷಯಕ್ಕೆ ಬರೋಣ.

ಪ್ರತಿಭಾ ಪಲಾಯನ.....ಪ್ರತಿಕ್ರಿಯೆ ಶುರು ಮಾಡಿದವರೊಬ್ಬರು ?ನಮ್ಮ ಕರ್ನಾಟಕದಲ್ಲಿ ಓದಿಕೊಂಡು, ಕರ್ನಾಟಕದಲ್ಲೇ ಸೇವೆ ಸಲ್ಲಿಸಬೇಕು, ಇಲ್ಲವಾದಲ್ಲಿ ಅವರ ಡಿಗ್ರಿಯನ್ನು ಕ್ಯಾನ್ಸಲ್ ಮಾಡಬೇಕು? ಅಂದರು. ಮತ್ತೊಬ್ಬರು, ?ನಮ್ಮ ರಾಜ್ಯದಲ್ಲಿ ಓದಿಕೊಂಡು ಬೇರೆ ರಾಜ್ಯಕ್ಕೆ ಹೋಗುವುದೇ ತಪ್ಪು, ಅಂಥಾದ್ರಲ್ಲಿ ಸಮುದ್ರೋಲ್ಲಂಘನ ಹೇಗೆ ಮಾಡುತ್ತಾರೆ?? ಬರೆದರು. ಕೆಲವರು ಅಂದರು, ?ನಮ್ಮ ನಾಡಿನಲ್ಲಿ ಓದಿ ಬೇರೆದೇಶಕ್ಕೆ ಹೋದರೆ ಹೇಗೆ, ನಮ್ಮ ದೇಶಕ್ಕೆ ನಷ್ಟವಲ್ಲವೆ? ಅದಕ್ಕೇ ಅವರು ಇಲ್ಲೇ ಇರಲಿ?. ಇನ್ನು ಕೆಲವರು ಬರೆದರು, ?ಅವರು ಹೋಗಲಿ ಬಿಡಿ ನಾವು ಸುಖವಾಗಿರೋಣ ಜಾಗ ಖಾಲಿಯಾಯಿತು?. ಮತ್ತೆ ಕೆಲವರು,?ಅವರು ಹೋಗಿ ವಾಪಸ್ಸು ಬರಲಿ, ಆಗ ನಮ್ಮ ದೇಶಕ್ಕೆ ಲಾಭ?. ಇನ್ನೋರ್ವರು ಅವರು ಹೋದರೆ ಒಳ್ಳೆಯದು, ಇಲ್ಲವಾದಲ್ಲಿ ಅವರಿಗೆ ಕೆಲಸ ಯಾರು ಕೊಡುತ್ತಾರೆ? ಮತ್ತೋರ್ವರು ಅವರು ವಾಪಸ್ಸು ಬಂದ ಮೇಲೆ ಅವರಿಗೆ ಯಾರೂ ಕೆಲಸ, ಜಾಗ ಕೊಡಬಾರದು ಅಂದರು. ಮತ್ತೂ ಕೆಲವರು ಹೇಳಿದರು, ?ಹೋದವರಿಗೆ ಹೆಣ್ಣುಕೊಡಬಾರದು, ಸಮಾಜದಿಂದ ಬಹಿಷ್ಕಾರ ಹಾಕಬೇಕು!' ಹಾಗೇ ಇನ್ನೂ ಬರೆದರು, ?ಅವರನ್ನು ಗಡೀ ಪಾರು ಮಾಡಬೇಕು!?

ಅಬ್ಬಬ್ಬಾ ಏನೇನು ಶಾಪ ಹಾಕಿದರೋ ಇನ್ನೇನು ಬೈಗುಳ ಬರೆದಿದ್ದರೋ ಪುಣ್ಯಕ್ಕೆ ಆ ಪತ್ರಿಕೆಯವರು ಎಲ್ಲವನ್ನೂ ಪ್ರಿಂಟ್ ಮಾಡಿರಲಿಲ್ಲ ಅಂದು ಕೊಳ್ಳುತ್ತೇನೆ!

ಅಲ್ಲಿಂದ ಮುಂದೆ ನಾಲ್ಕೈದು ವರ್ಷ ಕಳೆಯಿತು. ಮಲೆನಾಡಿನ ಒಂದು ಹಳ್ಳಿ, ಓದಲಿಕ್ಕೋ ಕೆಲಸಕ್ಕೋ ಹೊರ ಹೋದವರು ಮನೆಗೆ ಬಂದು-ಹೋಗಿ ಓಡಾಟ ಮಾಡಿದರು. ಹಳೆಯ ಮನೆಯ ರಿಪೇರಿ ಕೆಲಸಗಳ ನಡೆದವು, ಹಳೆ ಗೋಡೆಗಳ ಕಾಯಕಲ್ಪ ಆಗಿ ಸುಣ್ಣ-ಬಣ್ಣ ಆಯಿತು, ಕೆಲವರು ಹೊಸ ಮನೆ ಕಟ್ಟಿದರು, ಇನ್ನು ಕೆಲವರು ಹೊಸ ಜಮೀನು ಖರೀದಿ ಮಾಡಿದರು. ಮನೆಗೊಂದು ಬೈಕೋ, ಟಿವಿಎಸ್ಸೋ, ಸೈಕಲ್ಲೋ ಬಂದಿತು. ಬೇರೆಯವರು ಇವರು ಮುಂದುವರೆದಿದ್ದನ್ನು ನೋಡಿ ತಮ್ಮ ಮಕ್ಕಳನ್ನೂ ಬೆನ್ನು ಹತ್ತಿ ಓದಿಸಿದರು. ಒಳ್ಳೆಯ ಶಾಲೆಗೆ ಸೇರಿಸಿದರು. ಮೊದಲು ತೋಟಕ್ಕೋ, ಹೊಲಕ್ಕೋ, ಗದ್ದೆಗೋ ಹೋಗಿ ಗೇದುಕೊಂಡು ಬಾ ಅಂತಿದ್ದವರು, ಕ್ರಮೇಣ 'ಕುಂತು ಓದು ಮಗನೇ' ಅಂದರು. ಕರೆಂಟು ಇಲ್ಲದಿದ್ದರೂ ಅವನಿಗಾಗಿ ಒಂದು ಚುಮಣಿ (ಸೀಮೆ) ಎಣ್ಣೆ ದೀಪ ರಿಸರ್ವ್ ಮಾಡಿ ಇಟ್ಟರು. ಆ ಮಕ್ಕಳೂ ಓದಿ ಮುಂದೆ ಮುಂದೆ ಬೆಳೆದರು. ಈ ಪ್ರವೃತ್ತಿ ಮನೆಯಿದ ಮನೆಗೆ ಹಬ್ಬಿ, ಊರಿಂದ ಊರಿಗೆ ಬೆಳೆಯಿತು, ಜೊತೆಯಲ್ಲೇ ಹೆಣ್ಣು

ಮಕ್ಕಳೂ ಓದಲು ಶುರುಮಾಡಿದರು. ಒಂದುಲೆಕ್ಕದಲ್ಲಿ ಕ್ರಾಂತಿ ಆಗಿತ್ತು.

ಎರಡು ವರ್ಷದ ಹಿಂದೆ ಆ ಊರಿಗೆ ಹೋಗಿದ್ದೆ. ಹಿರಿಯ, ತಿಳುವಳಿಕೆಯುಳ್ಳವರೊಬ್ಬರು ನನ್ನ ಹತ್ತಿರ ಹೇಳಿದರು. "ಎಲ್ಲಾ ಮಕ್ಕಳೂ ಇದೇ ಊರಲ್ಲೇ ಇದ್ದಿದ್ದರೆ ಹೇಗಮ್ಮಾ ಜೀವನ ಆಗ್ತಿತ್ತು, ಎಲ್ಲಾ ಓದಿ ಹೊರಗಡೆ ಹೋಗಿದ್ದಕ್ಕೆ ಇವತ್ತು ಒಳ್ಳೆಯ ಸ್ಥಿತಿಯಲ್ಲಿದೀವಿ". ನಾನೂ ಊರನ್ನು ಬಹಳ ವರ್ಷಗಳಿಂದ ನೋಡಿದ್ದೆ. ಇರೋ ತುಂಡು ಭೂಮಿಯನ್ನು ಹರಿದು-ಹಂಚಿ ಅಡಿ-ಅಡಿಗೂ ಕಚ್ಚಾಡಿ, ಊರಲ್ಲಿ ಪಾರ್ಟಿ ಪಂಗಡಗಳನ್ನು ಕಟ್ಟಿಕೊಂಡು ಕೋರ್ಟು-ಕಛೇರಿ ಅಲೆದು, ಹತ್ತಿರ ಇರೋ ಪಟ್ಟಣಕ್ಕೆ ಹೋಗಿ ಟಾರುರಸ್ತೆಯಲ್ಲಿ ಚಪ್ಪಲಿ ಸವೆಸಿ ಬೀರು-ಬಾರುಗಳಲ್ಲಿ ಮುಳುಗಿ ಹೊಂಡ ಕಾಲುವೆಯಲ್ಲಿ ಬಿದ್ದು ಹೊರಳಾಡಿ ಯಾರ್ಯಾರದೋ ಸಹವಾಸ ಮಾಡಿ ಮರುದಿನ ಬೆಳಗ್ಗೆ ಮನೆಗೆ ಬಂದು "ಆಟ ನೋಡಲು ಹೋಗಿದ್ದೆ" ಎಂದು ಎಲ್ಲರಿಗೂ ಗೊತ್ತಾಗುವಂತೆ ಹಸೀ ಸುಳ್ಳು ಹೇಳುವ ಪುಂಡು ಹುಡುಗರ ಊರು ಗಳಲ್ಲಿ ಎಂಥಾ ಬದಲಾವಣೆ? ಆಶ್ಚರ್ಯವಾಯಿತು. ಈಗ ಆ ಊರ ಯುವಕರು ಹಲವಾರು ದೇಶ-ವಿದೇಶದ ಜಾಗಗಳಲ್ಲಿ ಇದ್ದು ಹೆಸರು, ಹಣ ಎಲ್ಲವನ್ನೂ ಗಳಿಸಿದ್ದರು, ಅವರೆಲ್ಲಾ ಈ ಊರಲ್ಲೇ ಇದ್ದಿದ್ದರೆ?

ಆ ಊರಲ್ಲಿ ಒಂದು ಮನೆ. ಎಲ್ಲರ ಮನೆಯಲ್ಲೂ ಸಾಮಾನ್ಯ ಸರಾಸರಿ ಐದಾರು ಮಕ್ಕಳು ಇದ್ದ ಆ ಕಾಲದಲ್ಲಿ ಈ ಮನೆಯಲ್ಲಿ ಎಂಟು ಜನ ಮಕ್ಕಳು. ಇದ್ದದ್ದು ಮೂರು ಎಕರೆ ಅಡಿಕೆ ತೋಟ, ಮಳೆ ನಂಬಿ ಬೆಳೆ ಅಲ್ಲದಿದ್ದರೂ, ಬೆಳೆ ನಂಬಿ ಜೀವನ ಮಾಡಲಾಗುತ್ತಿರಲಿಲ್ಲ. ಕಾರಣ ರೇಟನ್ನು ನಿರ್ಧಾರ ಮಾಡುವವರು ಇವರಲ್ಲ. ಅಡಿಕೆಗೆ ಬೆಂಬಲಬೆಲೆ ಅಂತ ಮೊನ್ನೆ ಮೊನ್ನೆ ಬಂದಿದೆಯೇ ಹೊರತು ಅಲ್ಲೀವರೆಗೆ ಯಾರೂ ಕೇಳುವವರು ದಿಕ್ಕಿರಲಿಲ್ಲ. ಅದನ್ನು ನೋಡಿ ಊರಲ್ಲೊಬ್ಬರು ಆಡಿಕೊಂಡರು .'ಇವರ ಮನೆಯಲ್ಲಿ ಅಷ್ಟೊಂದು ಮಕ್ಕಳು, ಎಲ್ಲಾ ಹೋಟೆಲಲ್ಲಿ ಲೋಟ ತೊಳೆಸೋದೆ ಗತಿ'. ಅದು ಹಾಗಾಗಲಿಲ್ಲ. ಮಕ್ಕಳು ಓದಿದರು, ಕೆಲಸವನ್ನು ಹೇಗೋ ಎಲ್ಲೋ ಸಂಪಾದಿಸಿದರು, ಎಲ್ಲರೂ ಅವರವರ ಕಾಲಮೇಲೆ ನಿಂತರು, ಮನೆಯಲ್ಲೊಬ್ಬ ಜವಾಬ್ದಾರಿ ತೆಗೆದುಕೊಂಡು ಬೇರೆಯವರು ಮನೆಗೆ ಹೊರಗಿನಿಂದ ಸಪೋರ್ಟ್ ಮಾಡಿದರು, ಇಡೀ ಸಂಸಾರ ಕಣ್ಣಿಗೆ ಕೋರೈಸಿತು. ಇದು ಅವರ ಮನೆಯೊಂದೇ ಅಲ್ಲ. ಮಲೆನಾಡಿನ ಹಲವಾರು ಮನೆಗಳ ಯಶಸ್ಸಿನ ಕಥೆ. ಕೆಲವೇ ವರ್ಷದ ಹಿಂದೆ ಒಂದು ಹೊತ್ತಿನ ಊಟಕ್ಕೆ ಪರದಾಡುತ್ತಿದ್ದ ಸಂಸಾರಗಳು ಈಗ ಎಲ್ಲದರಲ್ಲೂ ಸಮೃದ್ಧವಾಗಿವೆ ಅಂತ ಕಳೆದವಾರ ಆ ಊರಿಗೆ ಫೋನು ಮಾಡಿದಾಗ ಹೇಳಿದರಾದರೂ, ಯಾವ ಮನುಷ್ಯನೂ, ಯಾವ ಊರೂ, ಯಾವ ಕಾಲಕ್ಕೂ ಸಮಸ್ಯೆಗಳಿಂದ ಹೊರತಾಗಿರಲು ಸಾಧ್ಯವೇ ಇಲ್ಲ ಅಂತ ನನ್ನ ಮನಸ್ಸು ಹೇಳುತ್ತಿತ್ತು.

ಕೆಲದಿನಗಳ ಹಿಂದೆ ಖ್ಯಾತ ಲೇಖಕರೊಬ್ಬರು ಬರೆದಿದ್ದರು, "ಇಷ್ಟುದಿನ ಹಣದ ಮದದಿಂದ ಕುಣಿಯುತ್ತಿದ್ದವರು ಈಗ ಜನರಿಂದ ಹೇಗೆ ತಾತ್ಸಾರಕ್ಕೆ ಒಳಗಾಗುತ್ತಾರೆ" ಅಂತ. ಮತ್ತೊಂದು ಪತ್ರಿಕೆಯಲ್ಲಿ ಒಬ್ಬರು, 'ಊರಿಂದ ಹೊರಹೋದವರೆಲ್ಲ ಹೇಗೆ ವಾಪಸ್ಸು ಬರುತ್ತಿದ್ದಾರೆ ನೋಡು' ಅಂತ ಚುಡಾಯಿಸಿ ಬರೆದಿದ್ದರು. ಇನ್ನೂ ಹಲವಾರು ಪತ್ರಿಕೆಯಲ್ಲಿ ಹಲವಾರು ತರಹದ ಕುಹಕ ಬರಹಗಳು. ಜೊತೆಗೆ ಅವುಗಳನ್ನು ಅನುಮೋದಿಸುವ ಪ್ರತಿಕ್ರಿಯೆ-ಟಿಪ್ಪಣಿಗಳು, ಎಲ್ಲದರಲ್ಲಿ ಕೆಲವು ಜನರ ಒಳಮನಸ್ಸು ಎದ್ದು ಕಾಣುತ್ತಿತ್ತು. ಕೆಲವರು ಬರೆದು-ಮಾತಾಡಿಕೊಂಡು ಸಂತೋಷಪಟ್ಟರೆ ಉಳಿದವರು ಅದನ್ನು ಓದಿ, ಆಲಿಸಿ ಆನಂದ ಹೊಂದಿದರು! ಗಾಯದ ಮೇಲೆ ಬರೆ.

"ಬಹುಶಃ ಅಡಿಕೆತೋಟ ಅಂತ ಜಪ ಮಾಡ್ತಾ ಕೂತಿದ್ದರೆ ರಾಮಕೃಷ್ಣಹೆಗಡೆಯವರು ಮುಖ್ಯಮಂತ್ರಿ ಆಗುತ್ತಿರಲಿಲ್ಲ, ರಾಮಾಜೋಯ್ಸ್ ಗವರ್ನರ್ ಆಗ್ತಿರಲಿಲ್ಲ,ಮಧುರಾಭಟ್ ಗೃಹಿಣಿಗಿಂತ ಹೆಚ್ಚೇನೂ ಆಗುತ್ತಿರಲಿಲ್ಲ ಅಥವಾ ರಾಮಕೃಷ್ಣ, ವಿಜಯಕಾಶಿ, ಗಣಪತಿ ಭಟ್, ಶಂಭುಹೆಗಡೆಯವರು ನಮ್ಮ ಹೆಮ್ಮೆಯ ಕಲಾವಿದರಾಗುವುದಕ್ಕೆ ಸಾಧ್ಯವಿರಲಿಲ್ಲ. ಅಥವಾ ಸಮುದ್ರೋಲ್ಲಂಘನ ಮಾಡದಿದ್ದರೆ ಇಂದ್ರಾನೂಯಿ, ಕಲ್ಪನಾಛಾವ್ಲಾ, ಸುನಿತಾವಿಲಿಯಮ್ಸ್, ವಿಕ್ರಮ್ ಪಂಡಿತ್, ವಿನೋದ್ ಖೋಸ್ಲಾ, ಸಬೀರ್ ಭಾಟಿಯಾ, ಸುಬ್ರಹ್ಮಣ್ಯಂ ಚಂದ್ರಶೇಖರ್ ಮುಂತಾದ ಸಾವಿರಾರು ಮಹನೀಯರು ಗಾಂಧಿ ಪ್ರತಿಮೆಯೆದುರು ಕುಳಿತು





ನೆಲದ ಮಾತು

## ಯಲ್ಲಾಪುರ ತಾಲೂಕಿನ ಕುಗ್ರಾಮ ಲಾಲಗುಳಿಯಲ್ಲಿ

# 'ಸಾವಯವದ ಬೆಳಕು' !

– ಎಸ್ವೀ ವೈದ್ಯಹೆಗ್ಗಾರ್

**ದಿನ** ಕಳೆದಂತೆ ಆಹಾರ ಉತ್ಪನ್ನಗಳ ಬೇಡಿಕೆ ಅಧಿಕವಾಗುತ್ತಿದೆಯೇ ಹೊರತು ಕಡಿಮೆ ಅಲ್ಲ. ವಿಪರ್ಯಾಸ ಎಂದರೆ ಇದಕ್ಕೆ ಮೂಲವಾದ ಕೃಷಿ ಭೂಮಿಯೇನೂ ವೃದ್ಧಿಯಾಗಿಲ್ಲ. ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿದೆ. ಕೈಗಾರಿಕೆಗಳಿಗೆ, ಗಣಿಗಾರಿಕೆಗೆ ಬಲಿಯಾಗುತ್ತಿದೆ. ಇದರ ಜೊತೆಯಲ್ಲಿ ವಾತಾವರಣದ ವೈಪರೀತ್ಯಗಳು ಕೃಷಿಕನ ಪಾಲಿಗೆ ಬೆಂಬಿಡದ ಭೂತ. ಇಂತಹ ಹೊತ್ತಿನಲ್ಲಿ ಕಡಿಮೆ ಅವಧಿಯಲ್ಲಿ ಅಧಿಕ ಫಸಲು ಪಡೆಯುವುದು ಅನಿವಾರ್ಯ. ಈ ಸಂಬಂಧ ಬಹುಪಾಲು ರೈತರೆಲ್ಲರೂ ರಾಸಾಯನಿಕಗಳ ಮೊರೆ ಹೋಗುವಂತಾಯಿತು. ಪರಿಣಾಮ ಸಮೃದ್ಧ ಮಣ್ಣಿನ ಗುಣ ನಾಶವಾಗಿ ನೆಲವೆಲ್ಲ ಬರಡು ಬರಡು......

ಗರಿಷ್ಠ ಆದಾಯದ ಆಸೆಯಿಂದ ತಾತ್ಕಾಲಿಕವಾಗಿ ಭೂಮಿಯನ್ನು ಫಲವತ್ತುಗೊಳಿಸುವ ವಿನಾಶಕಾರಿಗಳ ಫಲಿತಾಂಶ ಏನೆಂದರೆ ಮುಂದಿನ ದಿನಗಳಲ್ಲಿ ಆ ಭೂಮಿಯಲ್ಲಿ ಏನನ್ನೂ ಸಾಗುವಳಿ ಮಾಡಲಾಗದ ಪರಿಸ್ಥಿತಿ ನಿರ್ಮಾಣವಾಗುವುದು ಖಂಡಿತ. ಮಳೆಯಿಲ್ಲದಿರುವುದು, ಅಕಾಲಿಕ ಮಳೆ, ಭೂಮಿಯ ತಾಪಮಾನ ಏರಿಕೆ ಇವಷ್ಟೇ ಅಲ್ಲದೇ ಕೃಷಿ ಸಮುದಾಯದ ಯುವಕರು ನಗರಗಳೆಡೆ ಮುಖ ಮಾಡಿರುವುದು ಕೃಷಿ ಕ್ಷೇತ್ರ ಸೊರಗಲು ಕಾರಣವಾಗಿದೆ. ಇಷ್ಟರ ಜೊತೆಯಲ್ಲಿಯೇ ಕೃಷಿಯನ್ನು ನಿರ್ವಹಿಸಿಕೊಂಡು ಹೋಗುತ್ತಿರುವ ಸಾಂಪ್ರದಾಯಿಕ ಕೃಷಿಕರಿಗೆ ನಿರೀಕ್ಷಿತ ಹಾಗೂ ನಿಶ್ಚಿತ ಆದಾಯ ಸಿಗದೇ ಕಂಗಾಲಾಗಿದ್ದಾರೆ. ಬೆಲೆ ಸಿಕ್ಕರೂ ಗುಣಮಟ್ಟ ಸರಿಯಿಲ್ಲದಿರುವುದು ರಾಸಾಯನಿಕ ಬಳಕೆಯಿಂದ ಬೇಡಿಕೆ ಕಳೆದುಕೊಳ್ಳುವುದು ಮುಂತಾದ ಕಾರಣಗಳಿಂದ ಕೃಷಿಕ ಮತ್ತಷ್ಟು ನೊಂದಿದ್ದಾನೆ.



ಈಗ ಪುನಃ ಸಾಂಪ್ರದಾಯಿಕ ಶೈಲಿಯ ಕೃಷಿ ವಿಧಾನಕ್ಕೆ ಕಾಲಿಟ್ಟು ಪರಿಹಾರ ಕಂಡುಕೊಳ್ಳುವ ಆಶಾದಾಯಕ ಹೆಜ್ಜೆ ಅಲ್ಲಲ್ಲಿ ಕಂಡು ಬರುತ್ತದೆ. ಇತ್ತೀಚಿನ ದಿನಗಳಲ್ಲಿ ಕಂಡು ಬರುತ್ತಿರುವ ಇನ್ನೊಂದು ಬೆಳವಣಿಗೆ ಎಂದರೆ ರೈತ ಪರ ಕೃಷಿ ಸಂಘಟನೆಗಳು, ಸಂಸ್ಥೆಗಳು ಸಾಂಪ್ರದಾಯಿಕ ಸಾವಯವ ಕೃಷಿ ಪದ್ಧತಿಯ ಕುರಿತು ಜಾಗೃತಿ ಮೂಡಿಸುವ, ಈ ಪದ್ಧತಿಯನ್ನು ಅನುಷ್ಠಾನಕ್ಕೆ ತರುವ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿವೆ. ಇದಕ್ಕೆ ಉದಾಹರಣೆಯಾಗಿ ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲೂಕಿನ ಕುಗ್ರಾಮವೆಂದೇ ಹೆಸರಾದ ಲಾಲಗುಳಿಯಲ್ಲಿ ಈಗ ಸಾವಯವದ ಬೆಳಕು ಮೂಡಿದ್ದು ನಮ್ಮ ಕಣ್ಣೆದುರಿದೆ.

ಲಾಲಗುಳಿ ಭತ್ತದ ಬೇಸಾಯಗಾರರೇ ಅಧಿಕ ಇರುವ ಪ್ರದೇಶ. ಕಳೆದ 2 ವರ್ಷಗಳಿಂದ ಇಲ್ಲಿ



***ಕಾರ್ಗಿಲ್ ಕದನವಿರಲಿ, ಬಾಂಗ್ಲಾ, ಶ್ರೀಲಂಕಾ ಕದನವಿರಲಿ, ಅಲ್ಲೆಲ್ಲಾ ಹೋರಾಡಿದ ಯಾವ ಸೈನಿಕನ ಮಕ್ಕಳೂ ಪ್ರಧಾನಿ, ರಾಷ್ಟ್ರಪತಿ ಅಷ್ಟೇಕೆ ಯಾವುದೇ ಮಾನವ ಹಕ್ಕುಗಳ ಸಂಘಟನೆಯ ಬಾಗಿಲು ಬಡಿದು ತಾನು ಇಂಜಿನಿಯರ್ ಆಗಬೇಕು. ವೈದ್ಯನಾಗಬೇಕು, ಅದಕ್ಕಾಗಿ ತನ್ನ ತಂದೆಯನ್ನು ರಣಭೂಮಿಯಿಂದ ಮನೆಗೆ ಕಳಿಸಿ ಎಂದೂ, ತಾನು ವಿಧವೆಯಾಗುತ್ತೇನೆ ಎಂದು ಯಾವ ಸೈನಿಕನ ಹೆಂಡತಿಯೂ ಸೆರಗು ಮುಂದೊಡ್ಡಿ ಪ್ರಾಣಭಿಕ್ಷೆ ಕೇಳಿಲ್ಲ. ಯಾವ ಗಾಂಧಿ ಪ್ರತಿಮೆಯ ಎದುರೂ ಕಪ್ಪುಪಟ್ಟಿ ಹಚ್ಚಿ ಕುಳಿತಿಲ್ಲ. ಯಾವ ಮಾತೆಯೂ ತಮ್ಮ ವೀರಪುತ್ರ ಸೈನಿಕರಿಗೆ ಪಲಾಯನವಾದ ಕೈಗೆತ್ತಿಕೊಳ್ಳಲು ಹೇಳಿಲ್ಲ. ಒಬ್ಬೊಬ್ಬ ಸೈನಿಕನ ಒಂದೊಂದು ಪತ್ರವೂ ಇಡೀ ಊರಿಗೆ ದೇಶಭಕ್ತಿಯ ಕಿಚ್ಚು ಹೊತ್ತಿಸುತ್ತದೆ. ಎಲ್ಲಿಯ ಗಾಲಿಬ? ಎಲ್ಲಿಯ ಗೌತಮಸಿಂಗ್?***

ಇದೇ 'ಮತ ರಾಜಕೀಯ' ದೇಶ ಕಟ್ಟುತ್ತಿರುವ ಬಗೆ ನೋಡಿ. ನ್ಯಾಯಾಂಗ ವ್ಯವಸ್ಥೆ, ಸೇನೆಯಲ್ಲಿ ಅಲ್ಪಸಂಖ್ಯಾತ, ಬಹು ಸಂಖ್ಯಾತ ಲೆಕ್ಕಚಾರಕ್ಕೆ ಇದೇ ಮನಃಸ್ಥಿತಿ ಕಾರಣ. ಪ್ರಜಾಪ್ರಭುತ್ವದ ವಿಡಂಬನೆಗೆ ಇದಕ್ಕಿಂತ ಹೆಚ್ಚಿನ ಉದಾಹರಣೆ ಬೇಕೇ? ಅತ್ತ ಅಸ್ಸಾಮಿನ, ಪ.ಬಂಗಾಳದ, ಒರಿಸ್ಸಾದ ಗಡಿಗಳಲ್ಲಿ ಬಾಂಗ್ಲಾ ಭಾರತದ ಭೂ ಭಾಗಗಳನ್ನು ಕಬಳಿಸಲು ಹೊಂಚು ಹಾಕಿ ಕುಳಿತಿರುವಾಗ, ಇತ್ತ ಚೀನಾ ಹಿಮಾಯದ ಟಿಬೇಟಿನಲ್ಲಿ ತನ್ನ ಸೇನಾ ಬಂಕರ್‌ಗಳನ್ನು ಸ್ಥಾಪಿಸಿದರೂ, ಪಾಕ್ ತನ್ನ ಜಾಣ ರಾಜನೀತಿಯ ಮೂಲಕ ಭಯೋತ್ಪಾದನೆಯ ಕುರಿತು ವಿಶ್ವದ ದಾರಿ ತಪ್ಪಿಸಲು ಯತ್ನಿಸುತ್ತಿದ್ದರೂ, ನಮ್ಮ ಪ್ರಧಾನಿಗೆ ಅದು (ಪಾಕ್) ಭಯೋತ್ಪಾದಕ ಶೋಷಿತ ರಾಷ್ಟ್ರದಂತೆ ಕಾಣುತ್ತಿದ್ದರೂ, ಉತ್ತರ ಕೊರಿಯಾ ಪರಮಾಣು ಅಸ್ತ್ರ ಹೊಂದುವುದರ ಮೂಲಕ ಭಾರತಕ್ಕೆ ಪರ್ಯಾಯ ಬೆದರಿಗೆ ಒಡ್ಡುತ್ತಿದ್ದರೂ, ಆ ದೂರದ ಮೂಲ ಭೂತವಾದಿ ಇರಾನ್‌ನೊಂದಿಗಿನ ಪೆಟ್ರೋಲಿಯಂ ಒಪ್ಪಂದ ತೂಗುಯ್ಯಾಲೆಯಲ್ಲಿದ್ದರೂ, ಶ್ರೀಲಂಕಾದ ಜನಾಂಗೀಯ ಘರ್ಷಣೆಯ ನೆಪದಿಂದ ಅಮೇರಿಕಾ, ಚೀನಾ, ನಾರ್ವೆ ರಾಷ್ಟ್ರಗಳು ದಕ್ಷಿಣ ಏಷ್ಯಾದ ವ್ಯವಹಾರಗಳಲ್ಲಿ ಮೂಗು ತೂರಿಸಲು ಯತ್ನಿಸುತ್ತಿದ್ದರೂ, ನಮ್ಮ ಕೈಯೊಳಗಿನ ಮುದ್ದುಗಿಣಿ ಎಂದೇ ಭಾವಿಸಲಾಗಿದ್ದ ನೇಪಾಳ ಮಾವೋವಾದಿಗಳ, 'ಪ್ರಚಂಡ' ಹಿಡಿತಕ್ಕೆ ಸಿಕ್ಕು ಚೀನಾದ ತೆಕ್ಕೆಯೊಳಕ್ಕೆ ಸೇರಿಕೊಳ್ಳಲು ಹುನ್ನಾರ ನಡೆಯುತ್ತಿದ್ದರೂ, ಅರುಣಾಚಲ ಪ್ರದೇಶದ ಮೇಲೆ ತನ್ನ ಹಕ್ಕು ಸ್ವಾಮ್ಯತೆ ಪ್ರತಿಪಾದಿಸಲು ಚೀನಾ ಯತ್ನಿಸುತ್ತಿದ್ದರೂ ನಮಗೆ 'ಅಲ್ಪಸಂಖ್ಯಾತರ ಹಿತರಕ್ಷಣೆ'ಯ ಸೋಗುಬೇಕು. 'ಮತ ರಾಜಕೀಯದ ಪರಾರಾಷ್ಠೆ' ತಲುಪಿದ್ದರ ಸಂಕೇತವಲ್ಲವೇ ಇದು?. ಈ ದೇಶ ಹಾಳುಗೆಡವಲು ಪಾಕಿಸ್ಥಾನದ ಐ.ಎಸ್.ಐ ಯಾಕೆ ಬೇಕು? ಲಷ್ಕರೆ ತೆಯ್ಯಬಾ, ಲಾಡೆನ್ ಗುಂಪು ನಮಗೆ ಬೇಡವೇ ಬೇಡ. ಈ ಮತಬ್ಯಾಂಕ್ ರಾಜಕಾರಣವೊಂದೇ ಇನ್ನೊಂದು ಜಿನ್ನಾನಿಗೆ ಜನ್ಮ ಕೊಡಬಹುದು! ಕೋಟೆ ಹೊರಗೂ, ಒಳಗೂ ವೈರಿ ಸೈನಿಕರು ನುಸುಳಿರುವಾಗ ದಾಳಿಗೊಳಗಾಗುವ ರಾಷ್ಟ್ರದ ಆಡಳಿತ ಆ ಕುರಿತು ನಿರ್ಲಕ್ಷ್ಯ ವಹಿಸುವುದು ತರವೇ?

ಇಂತಹ ಮಾನಸಿಕತೆ ಬೆಳೆಯಲು ಕಾರಣ ಅಧಿಕಾರದಾಹವೇ? ವಿವೇಕ ಶೂನ್ಯವೇ? ಅಲ್ಲಾ ನಮಗೆ ನಮ್ಮ ಇತಿಹಾಸ, ಸಂಸ್ಕೃತಿ, ಭಾಷೆ, ಆಚಾರ – ವಿಚಾರಗಳು ವರ್ಜ್ಯವಾದದ್ದೋ? ಆಗಿರಬಹುದು. ಏಕೆಂದರೆ ನಾವು ಯಾರೋ ಆಗಹೊರಟವರು. ನಮ್ಮ ಚಿಂತನೆಗಳು ತಪ್ಪಲ್ಲ ಆದರೆ ಅದರಲ್ಲಿ ನಾವು ಸೃಷ್ಟಿಸಿದ್ದು. ನಿರ್ಮಿಸಿದ್ದು ಅದು 'ತ್ರಿಶಂಕು ಭಾರತ'!. ಪ್ರಜಾಪ್ರಭುತ್ವದ ಹೆಸರಿನಲ್ಲೇ ಇದನ್ನು ಸಾಧಿಸಿದ್ದು. ಆದರೆ ವಿಶ್ವಕವಿ ರವೀಂದ್ರನಾಥ ಟಾಗೋರರ ಆಶಯದ "ಎಲ್ಲಿ ನಿನ್ನಿಂದಾಗಿ ವಿಶಾಲವಾಗುತ್ತಿರುವ ಜಗತ್ತಿನಡೆಗೆ ಮನ ಹರಿವುದೋ, ಎಲ್ಲಿ ನಿರ್ಭಯವಾಗಿ ತಲೆಯೆತ್ತಿ ನಿಲ್ಲಬಹುದೋ ಅಂತಹ ಸ್ವಾತಂತ್ರ್ಯ ಸ್ವರ್ಗದಲ್ಲಿ, ಹೇ ದೇವಾ, ಈ ದೇಶ ಎಚ್ಚೆತ್ತು ಕೊಳ್ಳುವಂತೆ ಮಾಡು!!". ಈಡೇರಲಿಲ್ಲವೇನೋ? ಅಂತಹ ಸ್ವಾತಂತ್ರ್ಯ ಸ್ವರ್ಗ ನಮ್ಮದಾಗಿಸಲು ಎಚ್ಚೆತ್ತು ಕೊಳ್ಳೋಣ. ತಾಯಿ ಭಾರತಿಗೆ ಜಯವಾಗಲಿ.





ಬಾವುಟ ನೆಟ್ಟು ಉಪವಾಸ ಮಾಡುತಿದ್ದರೋ ಏನೋ?ಹಾಗೇ ಇವರೆಲ್ಲಾ ಇಲ್ಲೇ ಇದ್ದಿದ್ದರೆ ನಮ್ಮ ದೇಶ ಇನ್ನೊಂದು ಪಾಕಿಸ್ಥಾನವೋ, ಕೀನ್ಯಾವೋ, ಬಾಂಗ್ಲಾವೋ ಅಥವಾ ಹೆಚ್ಚೆಂದರೆ ನೇಪಾಳವೋ ಆಗೋದಕ್ಕೆ ಛಾನ್ಸ್ ಇತ್ತು ಮತ್ತು ನಮ್ಮ ಹಳ್ಳಿಗಳಲ್ಲಿ ಅಲ್ಪ ಸ್ವಲ್ಪ ಗದ್ದೆ ತೋಟ ಹೊಲ ಗಡಿಪಂಚಾಯಿತಿ ಗಲಾಟೆ ಮಾಡ್ಕಂತ, ಸೋಮಾರೀ ಕಟ್ಟೆಯಲ್ಲಿ ಪಟಂಗ ಹೊಡ್ಕಂತ, ಓಸಿ ಇಸ್ಪೀಟು ಜೂಜು ಲಾಟರಿಯ ಇನ್ಕಂ ಮೇಲೆ ಅವಲಂಬಿತವಾಗಿ, ಗ್ರಾಮೀಣ ಬ್ಯಾಂಕು, ಸೊಸೈಟಿಗಳ ಸಾಲ ತೀರಿಸಲಾಗದೆ, ಮತ್ತೆ ರೈತರ ಆತ್ಮಹತ್ಯೆ? ಅಂತ ಪೇಪರ್ನೋರಿಗೆ ಒಳ್ಳೆಯ ಆಹಾರ ಆಗ್ತಿದ್ರೋ ಏನೋ" ಅಂತ ಮಲೆನಾಡಿನ ಬ್ಯಾಂಕ್ ಮ್ಯಾನೇಜರ್ ಒಬ್ಬರು ಮಾತಾಡೋದನ್ನ ಕೇಳಿ ಪ್ರತಿಭಾಪಲಾಯನಕ್ಕೂ ಇವರು ಹೇಳಿದ್ದಕ್ಕೂ ಏನಾದರೂ ಸಂಬಂಧವಿರಬಹುದೇ ಎಂದು ಯೋಚಿಸುತ್ತಾ ಮುನ್ನಡೆದೆ.

ಮುಂದೊಂದುಕಡೆ ಚರ್ಚೆ ನಡೆಯುತ್ತಿತ್ತು. ಈಗ ವಿಶ್ವದ ಆರ್ಥಿಕ ಸಂಕಷ್ಟದಿಂದಾಗಿ ಎಲ್ಲಾದೇಶಗಳೂ ಸಂಕಷ್ಟದಲ್ಲಿರುವಾಗ ನಮ್ಮ ದೇಶವೇನೂ ಹೊರತಲ್ಲ, ಆದರೆ ನಮ್ಮ ದೇಶಕ್ಕೆ ಇನ್ನೂ ನಿಜವಾದ ಬಿಸಿ ತಟ್ಟಿಲ್ಲ ಎಂದೇ ಹೇಳಬೇಕು. ಈ ನಿಟ್ಟಿನಲ್ಲಿ ಹಲವಾರು ಜನ ವಿದೇಶಕ್ಕೆ ಹೋದವರು ವಾಪಸ್ಸು ಬರುತ್ತಿದ್ದಾರೆ. ಬಂದವರು ಮತ್ತೆ ವಾಪಸ್ಸು ಹೋಗಬಹುದೇನೋ. ಈ ವಿಷಯದ ಬಗ್ಗೆ ಹಿರಿಯ ನಾಗರಿಕರ ಕಟ್ಟೆಯ ಈವೆನಿಂಗ್ ಅಸೆಂಬ್ಲಿಯಲ್ಲಿ ಸ್ವಾರಸ್ಯಕರ ಹರಟೆ ನಡೆದಿತ್ತು. ಒಬ್ಬರು ಪಕ್ಕದ ಮನೆಯ ಸಾಫ್ಟ್-ವೇರ್ ಇಂಜಿನಿಯರ್ ಬಗ್ಗೆ ಹೇಳುತ್ತಿದ್ದರು. ಮತ್ತೊಬ್ಬ ಹಿರಿಯ ನಾಗರಿಕರು ಅವರ ಸಂಬಂಧಿಯೊಬ್ಬರು ಶೇರು ಪೇಟೆಯಲ್ಲಿ ಹಣ ಕಳೆದುಕೊಂಡಿದ್ದು ವಿವರಿಸುತ್ತಿದ್ದರು.

ಒಟ್ಟಿನಲ್ಲಿ ಎಲ್ಲರಿಗೂ ಐಟಿಯಬಗ್ಗೆ, ಅಡಿಕೆ ತೋಟದವರ ಬಗ್ಗೆ ಮಾತಾಡೋದು ಅಂದ್ರೆ ಭಲೇ ಖುಶಿ ಕೊಡೋ ವಿಚಾರ, ಓದೋರಿಗೂ ಒಂಥರಾ ಮಜಾ! ಮಾತಾಡೊಕ್ಕೆ, ಬರೆಯೋದಕ್ಕೆ ಯಾವ ಅಡೆತಡೆ ಇಲ್ಲದ ನಮ್ಮ ದೇಶದಲ್ಲಿ, ಬಾಯಿಗೆ ಬಂದದ್ದು ಒದರುವ ರಾಜಕಾರಣಿಗಳಿಗೂ, ಇವರಿಗೂ ಇರೋ ವ್ಯತ್ಯಾಸ ಏನೂಂತ ಗೊತ್ತಾಗಲಿಲ್ಲ. ಕಾಫಿ, ಟೊಮ್ಯಾಟೋ, ಈರುಳ್ಳಿ, ತೆಂಗು ಬೆಳೆಯುವ ಬೆಳೆಗಾರರಿಗೂ ಅಡಿಕೆ, ಏಲಕ್ಕಿ, ಮೆಣಸು ಬೆಳೆಯುವ ಕೃಷಿಕರಿಗೂ ಹೇಗೆ ವ್ಯತ್ಯಾಸ ಹುಡುಕುತ್ತಾರೆ ಅಂತನೇ ಅರ್ಥವಾಗಲಿಲ್ಲ. ಅಥವಾ ಮೆತ್ತಗಿರುವ ಜನರ ಬಗ್ಗೆಯೇ ಅಷ್ಟೊಂದು ತಾತ್ಸಾರವ? ಡಾರ್ವಿನ್ ಹೇಳಿದ "Might is right" ಅಕ್ಷರಶಃ ಸತ್ಯವಿರಬಹುದಾ?

ಕೊನೆಯಲ್ಲೊಬ್ಬರು ಹೇಳಿದರು. "ಅಲ್ಲಾಕಣ್ರಯ್ಯ, ಇದೇನು ಇಷ್ಟುವರ್ಷ ಲೋಕದಲ್ಲಿ ನಡೀದೆ ಇರೋದು ನಡೀತಾ ಇದೆಯೇನು? ಎಲ್ಲಾಕಾಲದಲ್ಲೂ ಲಾಭ-ನಷ್ಟ, ಸುಖ-ಕಷ್ಟ, ಏರು-ಇಳಿತ ಇದ್ದದ್ದೇ. ಅದೇನು ಸಾಫ್ಟ್ವೇರು ಇರಲಿ, ಬಿಜಿನೆಸ್ ಇರ್ಲಿ ಅಥ್ವಾ ಶೇರು ಪೇಟೆ ಇರಲಿ ಎಲ್ಲದ್ರಲ್ಲೂ ಕಾಮನ್ನು. ಹರ್ಷದ್ ಮೆಹ್ತಾ ಸ್ಕ್ಯಾಂಡಲ್ ನಲ್ಲಿ ಎಲ್ಲಾ ಹೋಗೇಬಿಡ್ತು ಶೇರು ಪೇಟೆ ಇನ್ನು ಮೇಲೇಳೋದೇ ಇಲ್ಲ ಅಂದ್ರು, ಏನಾಯ್ತು? ಎಲ್ಲಾ ಬಿಜಿನೆಸ್ಸು ಅಷ್ಟೆ, ಸಾಫ್ಟ್ವೇರೂ ಅಷ್ಟೇ, ಈಗೊಂದು ಎಂಟು ವರ್ಷದ ಹಿಂದೆ ಹೀಗೇ ಆಗಿತ್ತು, ಸಾಫ್ಟ್ ವೇರ್ ಮುಳುಗೇ ಹೋಯ್ತು, ಜಾವಾ ನೆಗೆದು ಬಿತ್ತು, ಅಂತ ಕೇಕೆಹಾಕಿ ನಕ್ಕರು, ಮುಂದೆ ಏನಾಯ್ತು? ಈಗ ಇಳಿಕೆ ಇದ್ರೆ ಮತ್ತೆ ಏರಿಕೆ ಮತ್ತೆ ಬಂದೇ ಬರುತ್ತೆ, ಮತ್ತೆ ಏರಿಕೆ ಮತ್ತೆ ಇಳಿಕೆ, ಅದು ಪ್ರಕೃತಿಯ ಗುಣ, ಹಳ್ಳಿಯಿಂದ ಹೋದವ್ರೂ ಅಷ್ಟೆ, ದಿಲ್ಲಿಯಿಂದ ಬಂದವ್ರೂ ಅಷ್ಟೆ, ಹೋಗ್ತಾ-ಬರ್ತಾ ಇರ್ತಾರೆ, ಲೋಕ ನಡೆಯದೇ ಹಂಗೆ, ಅವ್ರೆಲ್ಲಾ ನಮ್ ದೇಶ್ದಲ್ಲೇ, ಊರಲ್ಲೇ ಇದ್ದಿದ್ರೆ, ಆವ್ರಿಗೆ ಕೆಲ್ಸ ಯಾರು ಕೊಡ್ತಿದ್ರು? ಜಮೀನು ಎಲ್ಲಿತ್ತು, ಕಷ್ಟ ಎಲ್ಲಾ ಕಡೆಗೂ, ಎಲ್ಲಾ ಕಾಲದಲ್ಲೂ ಇದೆ, ರಾತ್ರಿ ಆಯ್ತು ಅಂತಂದ್ರೆ ಮತ್ತೆ ಬೆಳಗಾಗಲೇ ಬೇಕಲ್ವೇನ್ರಯ್ಯ??... ಎಲ್ಲರೂ ತಣ್ಣಗಾದರು, ತಲೆ ತಗ್ಗಿಸಿಕೊಂಡು ಮನೆಗೆ ಹೊರಡಲು ಎದ್ದರು.

ಓಹ್, ಇರಬಹುದೇನೋ, ನನಗೆ ಅಷ್ಟೊಂದು ತಿಳುವಳಿಕೆ ಇಲ್ಲಪ್ಪಾ ಅಂದುಕೊಳ್ಳುತ್ತಿದಾಗ ವಿಷ್ಣುವರ್ಧನ್ ಹಾಡಿದ "ತುತ್ತು ಅನ್ನ ತಿನ್ನೋಕೆ..........ರಾತ್ರಿ ಆದಾ ಮೇಲೆ ಅಗಲು ಬಂದೇ ಬತ್ತೈತೆ" ನೆನಪಾಯಿತು.ಅಡಿಕೆ ಬೆಳೆಗಾರರ ಮನೆಯವಳಾದ ನನಗೆ, ನಿಮ್ಮಜತೆಗೆ ವಿಷಯ ಹಂಚಿಕೊಳ್ಳಲೇ ಬೇಕೆನಿಸಿತು, ಅದಕ್ಕೇ ಈ ಬರಹ!

# ಅವರು ದೇಶಕ್ಕಾಗಿ ಪ್ರಾಣಕೊಟ್ಟವರು, ಇವರು ದೇಶದ್ರೋಹಿಗಾಗಿ ಪಣತೊಟ್ಟವರು !

**ಉದಯ ಕಿರಣ**

– ಉದಯ ಪಿ. ವಿಟ್ಲ.

**"ಪ್ರೀತಿಯ ಅಮ್ಮ** ಈ ಪತ್ರ ನಿಮಗೆ ತಲುಪುವ ಸಮಯ ನಾನು ನಿಮ್ಮನ್ನು ಆಗಸದಿಂದಲೇ ನೋಡುತ್ತಿರುತ್ತೇನೆ. ಭಾರತೀಯ ವಾಯು ಸೇನೆಯ ಹೆಮ್ಮೆಯ ಸೈನಿಕ ನಾನು. ಯುದ್ಧ ಕ್ಷೇತ್ರ ಪ್ರವೇಶಿಸುತ್ತಿದ್ದೇನೆ ಎಂಬ ಅಳುಕು ನನಗಿಲ್ಲ. ಒಂದು ವೇಳೆ ಮುಂದಿನ ಜನ್ಮ ಇದೆ ಎಂದಾಗಿದ್ದಲ್ಲಿ ವೀರಸೈನಿಕನಾಗಿ ಭಾರತಾಂಬೆಯ ಪದತಲದ ರಕ್ಷಣೆಗಾಗಿ ನನ್ನ ಜನ್ಮ ಸಾಫಲ್ಯಗೊಳಿಸಲು ಇಚ್ಛಿಸುತ್ತೇನೆ. ನಿಮಗೆ ಈ ಕಾರ್ಗಿಲ್ ರಣರಂಗಕ್ಕೆ ಬರಲು ಸಾಧ್ಯವಾದರೆ ದಯವಿಟ್ಟು ಭಾರತೀಯ ಸೇನೆ ನಿಮ್ಮ ಸುಂದರ ನಾಳೆಗಳಿಗಾಗಿ ವೈರಿಗಳನ್ನು ಮಣಿಸಿದ ವೀರಭೂಮಿ ನೋಡಬನ್ನಿ. ಎಂದಿಗೂ ಈ ಮಣ್ಣಿಗಾಗಿ ತಮ್ಮ ಪ್ರಾಣ ತ್ಯಾಗ ಮಾಡಿದ ವೀರಸೈನಿಕರನ್ನು ಮರೆಯಬೇಡಿ ಎಂದಷ್ಟೇ ಅಂಗಲಾಚಿ ಬೇಡಿಕೊಳ್ಳುತ್ತಿದ್ದೇನೆ. ಅಮ್ಮ, ನೀನೇ ಪುಣ್ಯವಂತೆ. ಈ ದೇಶಕ್ಕೆ ಅದೆಂತಹ ವೀರಸೈನಿಕ, ವೀರಪುತ್ರನನ್ನು ಕೊಟ್ಟೆ! ತಾಯಿ ಭಾರತಿಯ ಮಾನರಕ್ಷಣೆಗಾಗಿ ಬಂಧುಮಿತ್ರರು, ಕುಟುಂಬ ಹೀಗೆ ಯಾವೊಂದೂ ಆಮಿಷಕ್ಕೆ, ಸಂಬಂಧಗಳ ಸೆರೆಗೆ ಬಲಿಯಾಗದೆ ಪೂರ್ಣ ಆಶೀರ್ವಾದ ಮಾಡಿ ನನ್ನನ್ನು ಕಳಿಸಿದ್ದೀಯಾ. ಇಂತಹ ಮಾತೆಯರ ಆಶೀರ್ವಾದವೊಂದಿದ್ದರೆ ಈ ದೇಶಕ್ಕೆ ಎರಗುವ ವೈರಿಗೆ ಸೋಲಲ್ಲದೆ ಮತ್ತೇನನ್ನು ತಾನೇ ಭಾರತೀಯ ಸೇನೆ ದಯಪಾಲಿಸೀತು?"



*ದೇಶದ ಜಮ್ಮು ಕಾಶ್ಮೀರ ಗಡಿಗುಂಟ, ದೇಶದ್ರೋಹೀ ನಕ್ಸಲರ ವಿರುದ್ಧ, ಭಯೋತ್ಪಾದನೆಯ ವಿರುದ್ಧ ನಮ್ಮ ಸುಖನಿದ್ದೆಗಾಗಿ ತಮ್ಮ ಜೀವನ ಸವೆಸುವ, ಸೆಣಸುವ ಸೈನಿಕರ ಆಕ್ರಂದನ, ಸಾಹಸಗಾಥೆ ನಮ್ಮ ಕಿವಿಗಳಿಗೆ ಬೀಳುವುದೇ ಇಲ್ಲ. ಏಕೆಂದರೆ ಅದೊಂದು ಸುದ್ದಿಯೇ ಅಲ್ಲ. ಅದನ್ನು ಸುದ್ದಿ ಮಾಡಿದರೂ ತಮ್ಮ ಪ್ರಚಾರದ, ಪ್ರಶಸ್ತಿಯ ಬೇಳೆ ಬೇಯದು ಎಂಬ ಕನಿಷ್ಠ ಜ್ಞಾನ ನಮ್ಮ ಮಾನವ ಹಕ್ಕುಗಳ ಹೋರಾಟಗಾತಿಯರಿಗಿದೆ. ಎಷ್ಟಾದರೂ ನಮ್ಮದು ಪ್ರಗತಿಶೀಲ ಸಮಾಜವಲ್ಲವೇ? ಸತ್ತವನಿಗಾಗಿ ಮರುಕ ಪಡುವುದಕ್ಕಿಂತ ಕೊಂದವನ ಭವಿಷ್ಯತ್ತಿಗಾಗಿ ಅನುಕಂಪ ತೋರಿಸುವ ಕಾಲವಿದು!.*

ಹೀಗಂತ ಬರೆದವನು ವಾಯುಸೇನೆಯ ಗೌತಮ್‌ಸಿಂಗ್.

2001ರ ಭಾರತದ ಸಂಸತ್ ಸ್ಫೋಟದ ಸಂಚಿನ ರೂವಾರಿ ಅಫ್ಜಲ್ ಗುರುವಿನ ಪರ ವಕಾಲತ್ತು ವಹಿಸುವ ನಮ್ಮ ಬುದ್ಧಿಜೀವಿ, ಘೋಷಿತ ಪ್ರಭಾವೀ ವ್ಯಕ್ತಿಗಳು ನೋಡಬೇಕಾದ, ಓದಬೇಕಾದ ಘಟನೆಗಳು ಸಾಕಷ್ಟಿವೆ. ಪ್ರಸಕ್ತ ಸನ್ನಿವೇಶಗಳು, ನಮ್ಮ ಸಮಾಜದ ಗಣ್ಯರೆಂಬಂತೆ ಪೋಸು ಕೊಡುವವರ ವರ್ತನೆ ಹೇಸಿಗೆ ಹೆಚ್ಚಿಸುವಂತಹದ್ದು. ದೇಶದ ಜಮ್ಮು ಕಾಶ್ಮೀರ ಗಡಿಗುಂಟ, ದೇಶದ್ರೋಹೀ ನಕ್ಸಲರ ವಿರುದ್ಧ, ಭಯೋತ್ಪಾದನೆಯ ವಿರುದ್ಧ ನಮ್ಮ ಸುಖನಿದ್ದೆಗಾಗಿ ತಮ್ಮ ಜೀವನ ಸವೆಸುವ, ಸೆಣಸುವ ಸೈನಿಕರ





ಆಕ್ರಂದನ, ಸಾಹಸಗಾಥೆ ನಮ್ಮ ಕಿವಿಗಳಿಗೆ ಬೀಳುವುದೇ ಇಲ್ಲ. ಏಕೆಂದರೆ ಅದೊಂದು ಸುದ್ದಿಯೇ ಅಲ್ಲ. ಅದನ್ನು ಸುದ್ದಿ ಮಾಡಿದರೂ ತಮ್ಮ ಪ್ರಚಾರದ, ಪ್ರಶಸ್ತಿಯ ಬೇಳೆ ಬೇಯದು ಎಂಬ ಕನಿಷ್ಠ ಜ್ಞಾನ ನಮ್ಮ ಮಾನವ ಹಕ್ಕುಗಳ ಹೋರಾಟಗಾತಿಯರಿಗಿದೆ. ಎಷ್ಟಾದರೂ ನಮ್ಮದು ಪ್ರಗತಿಶೀಲ ಸಮಾಜವಲ್ಲವೇ? ಸತ್ತವನಿಗಾಗಿ ಮರುಕ ಪಡುವುದಕ್ಕಿಂತ ಕೊಂದವನ ಭವಿಷ್ಯತ್ತಿಗಾಗಿ ಅನುಕಂಪ ತೋರಿಸಬೇಕಾದ ಕಾಲವಿದು!. ಆದರೆ ಇದರಲ್ಲಿಯೂ ಕೆಲಮಟ್ಟಿನ ಅಘೋಷಿತ ಮೀಸಲಾತಿ ಇದೆ! ಏಕೆಂದರೆ ಸಾವರ್‌ಕರ್‌ರಂತಹ 'ವೀರ'ರನ್ನೇ ದೇಶದ್ರೋಹಿಗಳೆನ್ನುವವರು ನಾವೇ ಅಲ್ಲವೆ? ದೇಶವಿಭಜನೆಯ ದುರಂತ ಕತೆಗೆ ಮುನ್ನುಡಿ ಬರೆದ 'ಮೊಹಮ್ಮದ್ ಜಿನ್ನಾ' ನನ್ನು 'ಜಾತ್ಯತೀತವಾದಿ' ಎಂದು ಮಣೆಕೊಟ್ಟು ಕೂರಿಸಿದ್ದೇವೆ. ಅಬ್ದುಲ್‌ನಾಸಿರ್ ಮದನಿ, ಮಸೂದ್ ಅಜರ್‌ನಿಗಾಗಿ ಶಾಸನ ಬದಲಾಯಿಸಲು ಸಿದ್ಧವಿರುವ, ಅದಕ್ಕಾಗಿ ಯಾವುದೇ ಹಿಂಜರಿತ ಇಲ್ಲದ ನಮಗೆ, ಅಫ್ಜಲ್‌ಗುರು ಪ್ರಾಯೋಜಿಸಿದ 2001 ರ ಸಂಸತ್ ಸ್ಫೋಟದ ಸಂಚು ಕುಬ್ಜವಾಗಿ ಕಾಣುವುದು ಸಹಜವೇ. ವಿದ್ಯಾರ್ಥಿಗಳಿಗೆ 'ಗುರಿ' ತೋರಿಸಿಕೊಡಬೇಕಾದ ಗುರುತರ ಜವಾಬ್ದಾರಿಯ ಗುರು ಎಸ್.ಆರ್. ಗೀಲಾನಿ ಸಂಶಯದ ಲಾಭ ಪಡೆದು ಕೋರ್ಟಿನಿಂದ ಖುಲಾಸೆಗೊಂಡರೂ ಮರು ತನಿಖೆಗೆ ನಮ್ಮ ಸರ್ಕಾರ, ತನಿಖಾ ದಳಕ್ಕೆ ಹೊಳೆಯಲಿಲ್ಲ ಎಂದರೆ...! ಇದೇ ದೇಶದ್ರೋಹಿ ಗೀಲಾನಿ ಭಯೋತ್ಪಾದಕ ಹಾಗೂ ಭಾರತೀಯ ಸೇನೆಯಿಂದ ನೊಂದ ಕುಟುಂಬಗಳ ಮಾನವ ಹಕ್ಕಿಗಾಗಿ ಸಂಘಟನೆ ಕಟ್ಟಿಕೊಂಡಿದ್ದಾನೆಂದರೆ ಭಾರತದ ಮಾನವ ಹಕ್ಕುಗಳು ಎಂತಹವರ ಕೈಯಲ್ಲಿ ನರಳುತ್ತಿವೆ ಎಂಬುದಂತೂ ಸ್ಪಷ್ಟ.

ಸಂಸತ್‌ನ ಗೌರವ ಎತ್ತಿಹಿಡಿಯಲು ರಕ್ತತರ್ಪಣ ಗೈದ ಆ ಆರು ಜನ ಪೋಲೀಸ್ ಅಧಿಕಾರಿಗಳ ಕುಟುಂಬಕ್ಕೆ ಸತ್ತ 6 ವರ್ಷಗಳಿಂದಲೂ ಸೂಕ್ತ ಪರಿಹಾರ ದೊರೆತಿಲ್ಲ. 1979 ರಿಂದೀಚೆಗೆ ಅಸ್ಸಾಂ ಒಂದರಲ್ಲೇ ಹತ್ತು ಸಾವಿರಕ್ಕೂ ಹೆಚ್ಚು ಜನ 'ಉಲ್ಫಾ'ದ ಪ್ರತ್ಯೇಕತಾವಾದದ ಹೋರಾಟಕ್ಕೆ ಬಲಿಯಾಗಿದ್ದಾರೆ. ಜಮ್ಮು ಕಾಶ್ಮೀರವೊಂದರಲ್ಲೇ ಒಂದೂವರೆ ಲಕ್ಷಕ್ಕೂ ಹೆಚ್ಚು ಹಿಂದೂಗಳು ಭಯೋತ್ಪಾದಕರ ಗುಂಡಿಗೆ ಬಲಿಯಾಗಿದ್ದಾರೆ, ಅದೆಷ್ಟೋ ಕಾಶ್ಮೀರಿಗಳು ನಿರ್ವಸಿತರಾಗಿದ್ದಾರೆ. ಬಿಹಾರ, ಒರಿಸ್ಸಾ, ಆಂಧ್ರ, ಕರ್ನಾಟಕದಲ್ಲಿ ನಕ್ಸಲ್ ಪೀಡೆಯಿಂದ ನಲುಗಿದವರೆಷ್ಟೋ. ಇವರ್‍ಯಾರಿಗೂ ಮರುಗದ ಮನ ದೇಶ ದ್ರೋಹೀ ಅಫ್ಜಲನಿಗಾಗಿ ಮರುಗುತ್ತದೆ. ಆತನ ಮಗ 'ಗಾಲಿಬ'ನಿಗೆ ಭವಿಷ್ಯತ್ತಿನ ವೈದ್ಯನಾಗಬೇಕು ಎಂಬ ಕನಸು ಹುಟ್ಟಿಸಿ, ತನ್ನ ಆಶಾ ಪೂರೈಕೆಗೆ ತಂದೆ ಅಫ್ಜಲ್ ಜೀವದಲ್ಲಿರಬೇಕು ಎಂದು ನಿರ್ದೇಶಿಸಿ, ಪ್ರಚಾರಿಸಿ ಅಫ್ಜಲನಿಗೆ ಜೀವದಾನ ನೀಡಬೇಕೆಂದು ಮನಸು ಬಯಸುತ್ತಿದೆ. ಕಾರ್ಗಿಲ್ ಕದನವಿರಲಿ, ಬಾಂಗ್ಲಾ, ಶ್ರೀಲಂಕಾ ಕದನವಿರಲಿ, ಅಲ್ಲೆಲ್ಲಾ ಹೋರಾಡಿದ ಯಾವ ಸೈನಿಕನ ಮಕ್ಕಳೂ ಪ್ರಧಾನಿ, ರಾಷ್ಟ್ರಪತಿ ಅಷ್ಟೇಕೆ ಯಾವುದೇ ಮಾನವ ಹಕ್ಕುಗಳ ಸಂಘಟನೆಯ ಬಾಗಿಲು ಬಡಿದು ತಾನು ಇಂಜಿನಿಯರ್ ಆಗಬೇಕು. ವೈದ್ಯನಾಗಬೇಕು, ಅದಕ್ಕಾಗಿ ತನ್ನ ತಂದೆಯನ್ನು ರಣಭೂಮಿಯಿಂದ ಮನೆಗೆ ಕಳಿಸಿ ಎಂದೂ, ತಾನು ವಿಧವೆಯಾಗುತ್ತೇನೆ ಎಂದು ಯಾವ ಸೈನಿಕನ ಹೆಂಡತಿಯೂ ಸೆರಗು ಮುಂದೊಡ್ಡಿ ಪ್ರಾಣಭಿಕ್ಷೆ ಕೇಳಿಲ್ಲ. ಯಾವ ಗಾಂಧಿ ಪ್ರತಿಮೆಯ ಎದುರೂ ಕಪ್ಪುಪಟ್ಟಿ ಹಚ್ಚಿ ಕುಳಿತಿಲ್ಲ.

ಯಾವ ಮಾತೆಯೂ ತಮ್ಮ ವೀರಪುತ್ರ ಸೈನಿಕರಿಗೆ ಪಲಾಯನವಾದ ಕೈಗೆತ್ತಿಕೊಳ್ಳಲು ಹೇಳಿಲ್ಲ. ಒಬ್ಬೊಬ್ಬ ಸೈನಿಕನ ಒಂದೊಂದು ಪತ್ರವೂ ಇಡೀ ಊರಿಗೆ ದೇಶಭಕ್ತಿಯ ಕಿಚ್ಚು ಹೊತ್ತಿಸುತ್ತದೆ. ಎಲ್ಲಿಯ ಗಾಲಿಬ? ಎಲ್ಲಿಯ ಗೌತಮಸಿಂಗ್? ನಮ್ಮ ಸಂವಿಧಾನದ ಆಶಯವೇ "ನೂರು ಜನ ಅಪರಾಧಿಗಳ ಬಿಡುಗಡೆಯಾದರೂ ಒಬ್ಬ ನಿರಪರಾಧಿಗಳಿಗೆ ಶಿಕ್ಷೆಯಾಗಕೂಡದು" ಆದರೆ ನಮ್ಮ ಬುದ್ಧಿಜೀವಿಗಳ ಪ್ರಕಾರ "ನೂರು ಜನ ನಿರಪರಾಧಿಗಳು, ಅಮಾಯಕರನ್ನು ಕೊಂದರೂ ಒಬ್ಬ ಉಗ್ರಗಾಮಿಗೆ ಶಿಕ್ಷೆಯಾಗಕೂಡದು!"